1	ಚಿನ್ನು ತಳವಾರ	ಶಿವಾಜಿನಗರ, 1ನೇ ಕ್ರಾಸ್, ಮುಖ್ಯರಸ್ತೆ, ಸಾಯಿಬಾಬಾ ಮಂದಿರ, ಬೆಳಗಾವಿ ನಗರ, ಬೆಳಗಾವಿ.	72048 82320
2	ಮಹಾದೇವಿ ಹುಣಸಿಬೀಜ	ಮುಖ್ಯಸ್ಥರು, ಕನ್ನಡ ವಿಭಾಗ, ಕೆಎಲ್ಇ ಸಂಸ್ಥೆಯ ರಾಜಲಕ್ಷ್ಮಮಗೌಡ ವಿಜ್ಞಾನ ಮಹಾವಿದ್ಯಾಲಯ, (ಸ್ವಾಯತ್ತ), ಕಾಲೇಜು ರಸ್ತೆ, ಬೆಳಗಾವಿ-590001.	95918 55923
3	ಡಾ. ಕೆ ಎನ್ ದೊಡಮನಿ	ವಿವೇಕಾನಂದ ನಗರ, 3ನೇ ಕ್ರಾಸ್, ಉಲ್ಚೇನಹಟ್ಟಿ, ಪೀರನವಾಡಿ ಅಂಚೆ, ಬೆಳಗಾವಿ-590014.	94493 64135
4	ಶ್ರೀ ರಾಜಶೇಖರ ತಳವಾರ	ನಂ. 63/ಇ, 3ನೇ ಕ್ರಾಸ್, ಪಾರ್ವತಿ ನಿಲಯ, ದೀಪಕ್‌ಗಲ್ಲಿ, ಹಳೇಗಾಂಧಿನಗರ, ಬೆಳಗಾವಿ-590016.	92420 70787
5	ಶ್ರೀ ರವೀಂದ್ರ ಎನ್ ತೋಟಗೇರ	ಅಡ್ವೋಕೇಟ್, ಮಂಗಳಧಾಮ, ಮನೆ ನಂ. 22/ಬಿ, ಸರ್ವೆ ನಂ. 48/1ಸಿ, ಓಂ ಶಾಂತಿ ಮಾರ್ಗ, ಶಾಯೂನಗರ, ಬೆಳಗಾವಿ-590010.	98866 58191
6	ನದೀಮ್ ಸನದಿ	ನಂ. 140, ಅಂಚೆಸಿಂದೋಳ್ಳಿ, ತಾ & ಜಿ: ಬೆಳಗಾವಿ ಪಿನ್: 591124.	99720 94184

4. ಮಂಗಳೂರು ಮಹಾನಗರ ಪಾಲಿಕೆ:

ಕ್ರ.ಸಂ	ಹೆಸರು	ವಿಳಾಸ	ದೂರವಾಣಿ ಸಂಖ್ಯೆ
1	ಶ್ರೀ ಯು.ಎಚ್. ಖಾಲಿದ್ ಬಿನ್ ಯು.ಎಸ್. ಹಸನಬ್ಬ	ಪ್ಲಾಟ್ ನಂ. ೨೦೧, 'ಬಿ' ಬ್ಲಾಕ್, ನೆಲ್ಲಿಕಾಯಿ ರಸ್ತೆ, ಬಂದರ್ ಮಂಗಳೂರು-೫೭೫೦೦೧	9845499527
2	ಶ್ರೀ ರಾಜೇಶ್ ಕದ್ರಿ ಬಿನ್ ತುಕಾರಾಂ ಪುರಷ	ಅಕ್ಷರ ಮನೆ" ಡಿ/೯-೧೦೧/೧ ಕಂಟಲ್ಪಾಡಿ, ಪದವು ಶಕ್ತಿನಗರ ರಸ್ತೆ, ಮಂಗಳೂರು-೫೭೫೦೧೬	7760980911
3	ಶ್ರೀಮತಿ ಸುಜತಾ ದೀಪಕ್ ಕೋಂ ದೀಪಕ್ ಕೆ	ಡಿ/೨೧-೩-೨೭೮, ಮಹಾಲಕ್ಷ್ಮೀ ನಿಲಯ, ಹೂಗೆ ಬಜಾರ್, ಮಂಗಳೂರು-೫೭೫೦೦೧	9845593343
4	ಶ್ರೀ ಅಬ್ದುಲ್ ರಹಿಮಾನ್ ಖಾನ್ ಬಿನ್ ಆದಂ ಖಾನ್	#೧-೫೪, ಮಸ್ಜಿದ್ ರಸ್ತೆ, ದೇವಿನಗರ, ಕುಂಜತ್ತಬೈಲ್ ಅಂಚೆ, ಮಂಗಳೂರು-೫೭೫೦೧೫.	9880835659
5	ಶ್ರೀಮತಿ ಶಾಂತ ಎಸ್ ರಾವ್ ಕೋಂ ಸದಾಶಿವ	#೧೧-೨೬, ಅಕ್ಷತ ನಿವಾಸ, ಮಾರಿಗುಡಿ ಹತ್ತಿರ, ತಡಂಬೈಲ್, ಸುರತ್ಕಲ್, ಮಂಗಳೂರು.	9343564992
6	ಶ್ರೀ ವಿಜಯ ಕೋಟ್ಯಾನ್ ಬಿನ್ ಗೋಪಾಲ ಪೂಜಾರಿ	ಕಾಯರಮಂಚ್ ಬಿಲ್ಡಿಂಗ್ ೩ನೇ ಮಹಡಿ, ಎಂ.ಜಿ. ರಸ್ತೆ, ಬಳ್ಳಾಲ್‌ಭಾಗ್, ಮಂಗಳೂರು-೩	9448503582

5. ದಾವಣಗೆರೆ ಮಹಾನಗರ ಪಾಲಿಕೆ:

ಕ್ರ.ಸಂ	ಹೆಸರು	ವಿಳಾಸ	ದೂರವಾಣಿ ಸಂಖ್ಯೆ
1	ಡಾ. ಬಿ.ಸಿ. ದಾದಾಪೀರ್	ನಿವೃತ್ತ ಪ್ರಾಧ್ಯಾಪಕರು, ನಂ. 1152/36, 'ಬಿ' ಬ್ಲಾಕ್, ಜಯನಗರ, ದಾವಣಗೆರೆ-500074.	95917 62175
2	ಶ್ರೀಮತಿ ಎಸ್. ಸೌಮ್ಯ	ಬನಶ್ರೀ ನಿಲಯ, ಸಿದ್ದವೀರಪ್ಪ ಬಡಾವಣೆ, 7ನೇ ಕ್ರಾಸ್, ದಾವಣಗೆರೆ	-
3	ಶ್ರೀ ಬಿ.ಎನ್. ಮಲ್ಲೇಶ್	ನಂ. 5315/1, 2ನೇ ಅಡ್ಡರಸ್ತೆ, ಎಸ್.ಎಸ್. ಲೇಔಟ್, 'ಎ' ಬ್ಲಾಕ್, ಲಕ್ಷ್ಮೀ ಪ್ಲೋರ್ ಮಿಲ್ ಹಿಂಭಾಗ, ದಾವಣಗೆರೆ- 577004.	98440 60736
4	ರುದ್ರಾಕ್ಷಿಬಾಯಿ	ಕೋಂ ಪುಟ್ಟನಾಯ್ಕ ಎನ್ #368/3, ಸುಬ್ರಹ್ಮಣ್ಯನಗರ, ವಿವೇಕಾನಂದ ಬಡಾವಣೆ, ಕಡೆಕೊಪ್ಪ ರೈಸ್ ಮಿಲ್ ಎದುರು, ದಾವಣಗೆರೆ- 577005.	99646 84061
5	ಶ್ರೀ ಗಂಗಾಧರ ಬಿ.ಐ. ನಿಟ್ಟೂರು	ಬಿನ್ ಲೇ. ಬಿ. ಲಕ್ಷ್ಮಪ್ಪ ಮಾಸ್ತರ್, ನಂದಿ ಬ್ಯಾಂಕ್ ಪಕ್ಕದ ಬಲಗಡೆ ರಸ್ತೆ, ಮೆಲೆಬೆನ್ನೂರು (ಅಂಚೆ), ಹರಿಹರ ತಾ. ದಾವಣಗೆರೆ ಜಿ.	88677 02396
6	ನಾಗೇಂದ್ರ ಬಂಡೀಕರ್	#981/20, ಚೌಡಮ್ಮ ದೇವಾಲಯ ಹಿಂಭಾಗ, 12ನೇ ತಿರುವು, ಭಗತ್‌ಸಿಂಗ್ ನಗರ, ದಾವಣಗೆರೆ.	95388 79226

6. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ:

ಕ್ರ.ಸಂ	ಹೆಸರು	ವಿಳಾಸ	ದೂರವಾಣಿ ಸಂಖ್ಯೆ
1	ಸುನಂದಾ ಕಡಮೆ	ನಂ. 90, 'ನಾಗಸುಧಾ ಕಾಳಿದಾಸನಗರ, ವಿದ್ಯಾನಗರ ಎಕ್ಸ್‌ಟೆಷನ್, ಹುಬ್ಬಳ್ಳಿ-580031.	98457 79387
2	ಶ್ರೀ ಸಂಗಮೇಶ ಮೆಣಸಿನಕಾಯಿ	ಕೇರ್ ಆಫ್: ಎಸ್.ಎಂ. ತೋಗರ್ಸಿ, ಸಮುದಾಯ ಭವನದ ಹತ್ತಿರ, ಲಿಂಗರಾಜನಗರ ಉತ್ತರ, ಹುಬ್ಬಳ್ಳಿ-580031.	99455 16272
3	ಅಮೃತ ಇಜಾರಿ	ಮುಲ್ಲಾನ ಓಣಿ, ಕಾಳಮ್ಮನ ಅಗಸಿ, ಹುಬ್ಬಳ್ಳಿ-580024.	9632757334
4	ಡಾ. ಅನಸೂಯಾ ಕಾಂಬಳೆ	ಸಹಾಯಕ ಪ್ರಾಧ್ಯಾಪಕರು, ಡಾ. ಆರ್.ಸಿ. ಹಿರೇಮಠ್ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ. ಧಾರವಾಡ-580003.	99801 51006
5	ಡಾ. ಎಚ್ ಎ ಇಲಕಲ್ಲ	ನಿವೃತ್ತ ಪ್ರಾಂಶುಪಾಲರು, 'ಅಪ್ಪಬಸೇರಾ' ಪ್ಲಾಟ್ ನಂ. 67, ವಿಜಯಾನಂದ ನಗರ, 1ನೇ ಕ್ರಾಸ್, ರಾಣಿಚನ್ನಮ್ಮನಗರ ಹತ್ತಿರ, ಧಾರವಾಡ-580001.	9449628786
6	ಶ್ರೀಮತಿ ಲಿನೆಟ್ ಡಿಸಿಲ್ವಾ	ಶ್ರೀರಾಮನಗರ, ಅತ್ತಿಕೊಳ್ಳ, ಧಾರವಾಡ-580007.	94492 07919

7. ಕಲಬುರಗಿ ಮಹಾನಗರ ಪಾಲಿಕೆ:

ಕ್ರ.ಸಂ	ಹೆಸರು	ವಿಳಾಸ	ದೂರವಾಣಿ ಸಂಖ್ಯೆ
1	ಡಾ. ಕರುಣಾ ಜಮದಾರಖಾನಿ	ಕನ್ನಡ ಅತಿಥಿ ಉಪನ್ಯಾಸಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ	76248 94520
2	ಶ್ರೀ ಸುನೀಲ ಮಾನ್ಪಡೆ	ಮನೆ ನಂ. 149/T. MIG-2, ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿ, ಅರುಂದತಿ ಕಾಲೇಜು ಹತ್ತಿರ, ಹಳೆ ಜೇವರ್ಗಿ ರಸ್ತೆ, ಕಲಬುರಗಿ – 585102.	99726 08384
3	ಶ್ರೀ ವಿಶ್ವನಾಥ ಭಕರೆ	ಕೇ: ಎಸ್.ಎಸ್. ಪಾಟೀಲ ಬಬಲಾದ, ದೇವಿನಗರ, ಆಳಂದ ರಸ್ತೆ, ಜಬ್ಬಾರ ಪೆಟ್ರೋಲ್ ಪಂಪ ಹತ್ತಿರ, ಕಲಬುರಗಿ	96327 96777
4	ಡಾ. ಶ್ರೀಶೈಲ ನಾಗರಾಳ	ಮನೆ ನಂ. 3-978, ಗಣಮುಖಿಯವ ಮನೆ ಹಿಂಭಾಗ, ಪಾಟೀಲ ಆಸ್ಪತ್ರೆ ಹತ್ತಿರ, ಗಾಜಿಪುರ, ಕಲಬುರಗಿ-585101.	78929 86305
5	ಶ್ರೀಮತಿ ಸೈಯದಾ ಸೂಫಿಯಾ ಬೇಗಂ	ಸೈಯದ್ ಎಂಡಿ ಹುಸೇನಿ ಪ್ಲಾಟ್ ಸಂಖ್ಯೆ 54 ಸರ್ವೆ ಸಂಖ್ಯೆ 25 ಎಂ. ಗುಲ್ಶನ್ ಕಾಲೋನಿ ಹಬೀಬ್ ಮಸೀದಿ ಅಜಾದ್‌ಪುರ ರಸ್ತೆಯ ಹಿಂದೆ ಕಲಬುರಗಿ-5.	9590312470 8197754238.
6	ಶ್ರೀಮತಿ ಮಹಾದೇವಿ	ಎಂ. ಬಿ. ನಿಂಗಪ್ಪ, :ಮ. ನಂ. 11279/38/39/15,"ಅನಕಸೂಗೂರ ನಿಲಯ" ಜಿಲ್ಲಾ ಸ್ಟೇಡಿಯಂ ಹತ್ತಿರ,ಬ್ಯಾಂಕ ಕಾಲೋನಿ,ಕಲಬುರ್ಗಿ-585102,	8762237344

8. ಮೈಸೂರು ಮಹಾನಗರ ಪಾಲಿಕೆ:

ಕ್ರ.ಸಂ	ಹೆಸರು	ವಿಳಾಸ	ದೂರವಾಣಿ ಸಂಖ್ಯೆ
1	ಶ್ರೀ ಕೆ.ಆರ್. ಗೋಪಾಲಕೃಷ್ಣ ನೆಲೆಹಿನ್ನಲೆ	ನಂ. 234, 2ನೇ ಮೇನ್, 'ಡಿ'ಬಾ , 3ನೇ ಹಂತ, ವಿಜಯನಗರ, ಮೈಸೂರು-17.	94805 59876
2	ಡಾ. ದಿನಮಣಿ ಬಿ.ಎಸ್. (ಬಾತಿ)	ನಂ.ಇ.ಡಬ್ಲೂ.ಎಸ್-155, ಅನುದಿನ ನಿಲಯ, 10ನೇ ಕ್ರಾಸ್, ಗಂಗೋತ್ರಿ ಹುಡ್ಕೋ ಬಡಾವಣೆ, ಮೈಸೂರು-570009.	99648 90020
3	ಶ್ರೀ ನಾ. ದಿವಾಕರ	ಮನೆ ನಂ. 1898, 3ನೇ ಕ್ರಾಸ್, ವಿವೇಕಾ ವಿದ್ಯಾಲಯ ಸಮೀಪ, 3ನೇ ಹಂತ, ಮೈಸೂರು 570034.	94486 85755
4	ಶ್ರೀ ಪರಮೇಶ್	ತಂದೆ: ಕೆಂಪನಂಜಯ್ಯ ಮನೆ ನಂ. 70/1, 2ನೇ ಕ್ರಾಸ್, ಚಿಕ್ಕರಾಮಮಂದಿರ ರಸ್ತೆ, ತೊಣಚಿಕೊಪ್ಪಲ್, ಮೈಸೂರು-570009.	99018 45730
5	ಶ್ರೀ ಮೋಹನ್ ಕುಮಾರ್ ಗೌಡ	ಮನೆ ನಂ. 31/28, ಬನ್ಮಯ ರಸ್ತೆ, ದಳವಾಯಿ ಸ್ಕೂಲ್ ಹತ್ತಿರ, ವೀರಭದ್ರೇಶ್ವರ ದೇವಸ್ಥಾನದ ಮುಂಭಾಗ, ಮೈಸೂರು-570024.	94485 28625
6	ಡಾ. ಎಂ.ಪಿ. ಮಂಜಪ್ಪ ಶೆಟ್ಟಿ ಮಸಗಲಿ	ನಂ. 626, 13ನೇ ಕ್ರಾಸ್, 4ನೇ ಹಂತ, ಟಿ.ಕೆ. ಬಡಾವಣೆ, ಮೈಸೂರು-570009.	93791 21581 76765 72852

9. ಶಿವಮೊಗ್ಗ ಮಹಾನಗರ ಪಾಲಿಕೆ:

ಕ್ರ.ಸಂ	ಹೆಸರು	ವಿಳಾಸ	ದೂರವಾಣಿ ಸಂಖ್ಯೆ
1	ಡಾ. ಸಿರಾಜ್ ಅಹಮ್ಮದ್	ಪ್ರಾಧ್ಯಾಪಕರು, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ.	9448668585
2	ಶ್ರೀಮತಿ ಅಕ್ಷತಾ ಕೆ.	ಅರ್ಹನಿಶಿ ಪ್ರಕಾಶನ ಸ್ಥಾಪಕರು ಮತ್ತು ಪ್ರಕಾಶಕರು, ಕಂಟ್ರಿ ಕ್ಲಬ್ ಹತ್ತಿರ, ಜ್ಞಾನ ವಿಹರ ಬಡಾವಣೆ, ವಿದ್ಯಾನಗರ, ಶಿವಮೊಗ್ಗ.	9449174662
3	ಶ್ರೀ ಕೃಷ್ಣಮೂರ್ತಿ ಹೆಚ್. ಜಿ ಬಿನ್ ಚನ್ನಬಸವ ಹಿಳ್ಳೋಡಿ ಗಿಡ್ಡ ನಾಯಕ	ನಿವೃತ್ತ ಪ್ರಾಂಶುಪಾಲರು, ನಂ. 144, ಹಿಳ್ಳೋಡಿ, 4ನೇ ಅಡ್ಡ ರಸ್ತೆ, 6ನೇ ಮುಖ್ಯ ರಸ್ತೆ, ಅಶ್ವತ್ ನಗರ, ಶಿವಮೊಗ್ಗ	9448203018
4	ಶ್ರೀ ಕೆ.ಪಿ. ಶೆಟ್ಟಿ ಬಿನ್ ಬಿ. ಭಾಸ್ಕರ್ ಶೆಟ್ಟಿ	3ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆ, ಪ್ರಿಯದರ್ಶಿನಿ ಬಡಾವಣೆ, (ಆಲುಕೊಳ) ವಿನೋಬ ನಗರ (ಅ) ಶಿವಮೊಗ್ಗ	9886258449
5	ಶ್ರೀ ಎಸ್.ಕೆ. ಪ್ರಕಾಶ ಬಿನ್ ಎಂ. ಕಲ್ಲಪ್ಪ	3ನೇ ಅಡ್ಡ ರಸ್ತೆ, ಹೊಸಮನೆ, ಶಿವಮೊಗ್ಗ	9448183102
6	ಶ್ರೀ ಬಿ.ಎಲ್. ರಾಜು	ಪ್ರಾಧ್ಯಾಪಕರು, ಎಲ್.ಐ.ಜಿ. 75/1, 2ನೇ ಹಂತ, ಬಿ ಬ್ಲಾಕ್, ಕಲ್ಲಳ್ಳಿ, ವಿನೋಬನಗರ, ಶಿವಮೊಗ್ಗ.	9901043873

10. ತುಮಕೂರು ಮಹಾನಗರ ಪಾಲಿಕೆ:

ಕ್ರ.ಸಂ	ಹೆಸರು	ವಿಳಾಸ	ದೂರವಾಣಿ ಸಂಖ್ಯೆ
1	ಡಾ. ಮುಕುಂದ ಎಲ್	ಎಂ.ಎಂ.ಎಸ್. ಕಾಲೇಜು ಹಿಂಭಾಗ, ಶಿರಾ ಗೇಟ್, ಟೂಡಾ ಲೇ ಔಟ್, ತುಮಕೂರು.	94486 69141
2	ಡಾ. ಗಂಗಭೈರಯ್ಯ	ಕೌತಮಾರನಹಳ್ಳಿ, ತುಮಕೂರು ತಾ.	89709 24382
3	ಡಾ. ಆಶಾ ಬಗ್ಗನಡು	ಆದರ್ಶನಗರ, ತುಮಕೂರು.	82961 71380
4	ಶ್ರೀ ತಾಜುದ್ದೀನ್ ಷರೀಪ್	ಹೌಸಿಂಗ್ ಬೋರ್ಡ್ ಮುಖ್ಯ ರಸ್ತೆ, ತುಮಕೂರು.	98864 58191
5	ಡಾ. ಹನುಮಂತರಾಯ ಜಿ	ಸರಸ್ವತಿಪುರಂ, ತುಮಕೂರು.	73389 98160
6	ಶ್ರೀ ಪರಮೇಶ್ ಜಿ	ತಂದೆ: ಗೋವಿಂದರಾಜು ಹನುಮಾನ್ ನಿಲಯ, ಮಾರುತಿನಗರ, ಯಲ್ಲಾಪುರ, ತುಮಕೂರು.	96207 36384

11. ವಿಜಯಪುರ ಮಹಾನಗರ ಪಾಲಿಕೆ

ಕ್ರ.ಸಂ	ಹೆಸರು	ವಿಳಾಸ	ದೂರವಾಣಿ ಸಂಖ್ಯೆ
1	ಮಲ್ಲಿಕಾರ್ಜುನ ಗದ್ದನಕೇರಿ	ಮನೆ ನಂ. 159, ಸಾಯಿ ರೆಸಿಡೆನ್ಸಿ, ಬಾಗಲಕೋಟೆ ರಿಂಗ್ ರೋಡ್‌ಹತ್ತಿರ, ವಿಜಯಪುರ-580101.	82174 19526
2	ಹುಮಾಯೂನ ಮಮದಾಪುರ	ಪ್ಲಾಟ್‌ನಂ. 387, ಕಿರೀಟಿ ನಗರ, ವಿಜಯಪುರ-586109.	88806 23442
3	ಚೆನ್ನು ಕಟ್ಟಿಮನಿ	ವಾರ್ಡ್ ನಂ. 21, ಸಾಯಿಪಾರ್ಕ್ ಕೇರ್‌ಆಫ್: ಸುಭಾಷ್ ಹರಷಣಗೀರ್, ವಿಜಯಪುರ-586109.	99009 84648

4	ರೇಣುಕಾ ದೇಸಾಯಿ	ಬಿ-95, ಭಾವಸಾರನಗರ, ವಿಜಯಪುರ-586101.	77953 61440
5	ಶ್ರೀಮತಿ ದಾಕ್ಷಾಯಿಣಿ ಬಿರಾದಾರ	ವಜ್ರ ಹನುಮಾನ್ ರೈಲ್ವೆಗೇಟ್, KSRTC ಕಾಲೋನಿ, ಬಾಗಲಕೋಟೆ ರಸ್ತೆ, ವಿಜಯಪುರ-586109.	7259573572
6	ಶಂಕರ ಬೈಚಬಾಳ	'ವಚನ' ರಾಜಾಜಿನಗರ್, ಕೆ.ಇ.ಬಿ. ಹಿಂಭಾಗ, ವಿಜಯಪುರ-586109.	94487 51980

(ಕೆ.ಆರ್. ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
(ಆಡಳಿತ ಕನ್ನಡ)

PR-221

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಿನಾಂಕ: 01.04.2006ರ ಪೂರ್ವದಲ್ಲಿನ ನೇಮಕಾತಿ ಅಧಿಸೂಚನೆಗಳ ಮೂಲಕ ಆಯ್ಕೆ ಹೊಂದಿ ಆ ದಿನಾಂಕದಂದು ಅಥವಾ ನಂತರದಲ್ಲಿ ರಾಜ್ಯ ಸರ್ಕಾರದ ಸೇವೆಗೆ ಸೇರಿದ ನೌಕರರನ್ನು ಹಳೆಯ ಡಿಫೈನ್ಡ್ ಪಿಂಚಣಿ ಯೋಜನೆಗೆ ಒಳಪಡಿಸುವ ಕುರಿತು ಮುಂದುವರೆದ ಆದೇಶ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ಆಇ-ಪಿಇಎನ್/99/2023, ದಿನಾಂಕ: 24.01.2024.
02 ಸರ್ಕಾರಿ ಆದೇಶ ಸಂಖ್ಯೆ: ಆಇ-ಪಿಇಎನ್/99/2023, ದಿನಾಂಕ: 14.02.2025.

****

ಪ್ರಸ್ತಾವನೆ:

ದಿನಾಂಕ: 01.04.2006ರ ಪೂರ್ವದಲ್ಲಿನ ನೇಮಕಾತಿ ಅಧಿಸೂಚನೆಗಳ ಮೂಲಕ ಆಯ್ಕೆ ಹೊಂದಿ ಆ ದಿನಾಂಕದಂದು ಅಥವಾ ತದನಂತರದಲ್ಲಿ ರಾಜ್ಯ ಸರ್ಕಾರದ ಸೇವೆಗೆ ಸೇರಿದ ನೌಕರರನ್ನು ಡಿಫೈನ್ಡ್ ಪಿಂಚಣಿ ಯೋಜನೆ ವ್ಯಾಪ್ತಿಗೆ ಒಳಪಡಿಸಲು ಸರ್ಕಾರವು ಒಪ್ಪಿಗೆಯನ್ನು ನೀಡಿ ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಈ ಆದೇಶದ ವ್ಯಾಪ್ತಿಗೊಳಪಡುವ ಸರ್ಕಾರಿ ನೌಕರರಿಂದ ದಿನಾಂಕ: 30.06.2024ರೊಳಗೆ ಅಭಿಮತವನ್ನು ಪಡೆದು ಕ್ರೋಢೀಕೃತ ಪ್ರಸ್ತಾವನೆಯನ್ನು ಸರ್ಕಾರದ ಪರಿಶೀಲನೆಗಾಗಿ ಸಲ್ಲಿಸುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ನಿರ್ದೇಶನ ನೀಡಲಾಗಿತ್ತು.

ಮುಂದುವರೆದು, ದಿನಾಂಕ: 24.01.2024ರ ಸರ್ಕಾರಿ ಆದೇಶದನ್ವಯ ಡಿಫೈನ್ಡ್ ಪಿಂಚಣಿ ಯೋಜನೆ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಅಧಿಕಾರಿ / ನೌಕರರ ಎನ್.ಪಿ.ಎಸ್. ಪ್ರಾನ್ ಖಾತೆಯಲ್ಲಿ ಜಮೆಯಾಗಿರುವ ಸರ್ಕಾರದ ಹಾಗೂ ನೌಕರರ ವಂತಿಗೆಗಳನ್ನು ಹಿಂಪಡೆದು ಇತ್ಯರ್ಥಪಡಿಸಲು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರಿ ಆದೇಶದಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಅದರಂತೆ, ದಿನಾಂಕ: 24.01.2024ರ ಸರ್ಕಾರಿ ಆದೇಶದನ್ವಯ ಸಂಬಂಧಿತ ಅಧಿಕಾರಿ / ನೌಕರರು ಚಲಾಯಿಸಿದ ಅಭಿಮತವನ್ನು ಪರಿಶೀಲಿಸಿದ ಸರ್ಕಾರವು ದಿನಾಂಕ: 01.04.2006ರ ಪೂರ್ವದಲ್ಲಿನ ನೇಮಕಾತಿ ಅಧಿಸೂಚನೆಗಳ ಮೂಲಕ ಆಯ್ಕೆ ಹೊಂದಿ ಆ ದಿನಾಂಕದಂದು ಅಥವಾ ನಂತರದಲ್ಲಿ ರಾಜ್ಯ ಸರ್ಕಾರದ ಸೇವೆಗೆ ಸೇರಿದ **ವಾಣಿಜ್ಯ ತೆರಿಗೆಗಳ ಇಲಾಖೆಯ** ರಾಷ್ಟ್ರೀಯ ಪಿಂಚಣಿ ಯೋಜನೆಗೊಳಪಟ್ಟ ಅಧಿಕಾರಿ / ನೌಕರರನ್ನು ಹಳೆಯ ಡಿಫೈನ್ಡ್ ಪಿಂಚಣಿ ಯೋಜನೆಗೆ ಒಳಪಡಿಸಲು ತೀರ್ಮಾನಿಸಿ ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಇ 130 ವಾತೆಸಿ 2024 (ಭಾ-1), ಬೆಂಗಳೂರು, ದಿನಾಂಕ: 18.08.2025.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ರಾಷ್ಟ್ರೀಯ ಪಿಂಚಣಿ ಯೋಜನೆಗಳಪಟ್ಟ **ವಾಣಿಜ್ಯ ತೆರಿಗೆಗಳ ಇಲಾಖೆಯ** ಈ ಕೆಳಕಂಡ ಅಧಿಕಾರಿ / ನೌಕರರು ದಿನಾಂಕ: 01.04.2006ರ ಪೂರ್ವದಲ್ಲಿನ ನೇಮಕಾತಿ ಅಧಿಸೂಚನೆಗಳ ಮೂಲಕ ಆಯ್ಕೆ ಹೊಂದಿ ಆ ದಿನಾಂಕದಂದು ಅಥವಾ ನಂತರದಲ್ಲಿ ರಾಜ್ಯ ಸರ್ಕಾರದ ಸೇವೆಗೆ ಸೇರಿರುವುದರಿಂದ ದಿನಾಂಕ: 24.01.2024ರ ಸರ್ಕಾರಿ ಆದೇಶ ಸಂಖ್ಯೆ: ಆಇ-ಪಿಇಎನ್/99/2023 ರನ್ವಯ ಅವರನ್ನು ಡಿಫೈನ್ಡ್ ಪಿಂಚಣಿ ಯೋಜನೆಯ ವ್ಯಾಪ್ತಿಗೊಳಪಡಿಸಿ ಆದೇಶಿಸಿದೆ. ಸದರಿ ಅಧಿಕಾರಿ/ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 2-C ಅನ್ವಯವಾಗುವುದಿಲ್ಲ ಮತ್ತು ಇವರಿಗೆ ಅದೇ ನಿಯಮಾವಳಿಗಳ ನಾಲ್ಕನೇಯ ಅಧ್ಯಾಯ ಅನ್ವಯವಾಗತಕ್ಕದ್ದು.

ಕ್ರ.ಸಂ.	ಅಧಿಕಾರಿ/ನೌಕರರ ಹೆಸರು (ಶ್ರೀ/ಶ್ರೀಮತಿ) ಮತ್ತು ಪ್ರಸ್ತುತ ಹುದ್ದೆ	ಎನ್.ಪಿ.ಎಸ್. ಪ್ರಾನ್ ಖಾತೆ ಸಂಖ್ಯೆ	ಕೆ.ಜಿ.ಐ.ಡಿ. ಸಂಖ್ಯೆ
1	ಅರ್ಪಿತ ಜಿ. ಉಪ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ.	110050899899	2014282
2	ಸತೀಶ್ ಬಿ. ಪಾಟೀಲ್ ಉಪ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ.	110062949941	2014160
3	ಹೇಮಲತಾ ಎನ್. ಸಹಾಯಕ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ.	110030927069	2267692
4	ಮಧುಚಂದ್ರ ಬಿ.ಆರ್. ಸಹಾಯಕ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ.	110010899825	2026970

ಡಿಫೈನ್ಡ್ ಪಿಂಚಣಿ ಯೋಜನೆಯ ವ್ಯಾಪ್ತಿಗೊಳಪಡುವ ಮೇಲ್ಕಂಡ ಸರ್ಕಾರಿ ಅಧಿಕಾರಿ / ನೌಕರರ ಎನ್.ಪಿ.ಎಸ್. ಪ್ರಾನ್ ಖಾತೆಯಲ್ಲಿ ಜಮೆಯಾಗಿರುವ ಸರ್ಕಾರದ ಹಾಗೂ ನೌಕರರ ವಂತಿಗೆಗಳನ್ನು ಹಿಂಪಡೆದು ಇತ್ಯರ್ಥಪಡಿಸಲು ಸರ್ಕಾರದ ಆದೇಶದ ಸಂಖ್ಯೆ: ಆಇ-ಪಿಇಎನ್/99/2023, ದಿನಾಂಕ:14.02.2025ರಲ್ಲಿನ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿಗಳ ಸಂಖ್ಯೆ: ಆಇ-ಪಿಇಎನ್/65/2025, ದಿನಾಂಕ: 05.03.2025, ಆಇ-ಪಿಇಎನ್/191/2025, ದಿನಾಂಕ:26.05.2025 ಮತ್ತು ಆಇ-ಪಿಇಎನ್/104/2025, ದಿನಾಂಕ: 14.03.2025 ಗಳಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ. ರಾಜಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ.-2 & ಸಮನ್ವಯ)

PR-222

ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ: ಜಲ ವಿದ್ಯುತ್ ಮತ್ತು PSP ಯೋಜನೆಗಳ ಅಂದಾಜು ಬಂಡವಾಳ ವೆಚ್ಚದ ಮಿತಿಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ 54 ಪಿಪಿಟಿ 2023, ಬೆಂಗಳೂರು, ದಿನಾಂಕ: 22.09.2023.
2. ಕೇಂದ್ರ ವಿದ್ಯುತ್ ಸಚಿವಾಲಯದ ಅಧಿಸೂಚನೆ ಸಂಖ್ಯೆ: S.O. 3561 (E) ದಿನಾಂಕ 01.08.2025.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (01) ರ ಸರ್ಕಾರಿ ಆದೇಶದಲ್ಲಿ ರೂ.1000 ಕೋಟಿವರೆಗಿನ ಅಂದಾಜು ಬಂಡವಾಳ ವೆಚ್ಚದ ಜಲ ವಿದ್ಯುತ್ ಮತ್ತು PSP ಯೋಜನೆಗಳ DPR ಪರಿಶೀಲಿಸಲು ತಾಂತ್ರಿಕ ಮತ್ತು ಶಿಫಾರಸ್ಸು ಸಮಿತಿಯನ್ನು ರಚಿಸಲಾಗಿದೆ.

ಮೇಲೆ ಒದಲಾದ ಕ್ರಮ ಸಂಖ್ಯೆ (02) ರ ಅಧಿಸೂಚನೆಯಲ್ಲಿ ವಿದ್ಯುಚ್ಛಕ್ತಿ ಕಾಯ್ದೆ 2003 ರ ಸೆಕ್ಷನ್ 8(1) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಜಲ ವಿದ್ಯುತ್ ಯೋಜನೆಗಳ ಅಂದಾಜು ಬಂಡವಾಳ ವೆಚ್ಚದ ಮಿತಿಯನ್ನು ರೂ.1000 ಕೋಟಿಯಿಂದ ರೂ.3000 ಕೋಟಿಗಳಿಗೆ ಪರಿಷ್ಕರಿಸಲಾಗಿದೆ. ಸದರಿ ಪರಿಷ್ಕೃತ ಮೊತ್ತಕ್ಕಿಂತ ಅಧಿಕ ಬಂಡವಾಳ ಮೊತ್ತದ ಜಲ ವಿದ್ಯುತ್ ಯೋಜನೆಗಳು ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದ (CEA) ಅನುಮೋದನೆ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ.

ಆದ್ದರಿಂದ, ಮೇಲೆ ಓದಲಾದ ಕ್ರಮ ಸಂಖ್ಯೆ (01) ರ ಸರ್ಕಾರಿ ಆದೇಶದಲ್ಲಿ ರಚಿಸಲಾಗಿರುವ ಸಮಿತಿಗಳ ವ್ಯಾಪ್ತಿಗೆ ಒಳಪಡುವ ಜಲ ವಿದ್ಯುತ್ ಮತ್ತು PSP ಯೋಜನೆಗಳ ಅಂದಾಜು ಬಂಡವಾಳ ವೆಚ್ಚದ ಮಿತಿಯನ್ನು ಪರಿಷ್ಕರಿಸುವ ಸಲುವಾಗಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ 54 ಪಿಪಿಟಿ 2023,
ಬೆಂಗಳೂರು, ದಿನಾಂಕ: 06.09.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಜಲ ವಿದ್ಯುತ್ ಮತ್ತು PSP ಯೋಜನೆಗಳ ಅಂದಾಜು ಬಂಡವಾಳ ವೆಚ್ಚದ ಮಿತಿಯನ್ನು ರೂ.3000 ಕೋಟಿಗೆ ಹೆಚ್ಚಿಸಲಾಗಿದೆ. ಉಳಿದಂತೆ ಸರ್ಕಾರಿ ಆದೇಶ ಸಂಖ್ಯೆ ಎನರ್ಜಿ 54 ಪಿಪಿಟಿ 2023 ದಿನಾಂಕ 22.09.2023 ರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿನೋದ್ ಕುಮಾರ್ ಡಿ.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

PR-223

PROCEEDINGS OF GOVERNMENT OF KARNATAKA

Sub: Census 2027 - Constitution of State Level Census Co-ordination Committee (SLCCC) - reg.

Ref: D.O Letter No: 9/14/2025-CD(Cen), dated: 15.07.2025 of Home Secretary, Government of India.

*****

Preamble:

The Secretary, Home Department, Government of India vide letter referred above has stated that the Government of India vide Gazette Notification dated: 16.06.2025 has declared to conduct the Census 2027 in the country in two phases and with that the process of census has begun. The Census of India, a monumental administrative and statistical exercise with a 150 years history, is far more than just a head-count. It is a vital tool that provides crucial data for government policies, planning, and effective implementation of schemes and programmes benefiting diverse groups.

Further, Census 2027 is going to be particularly significant. It will be a fully digital exercise wherein enumerators will be collecting data on mobile and also offering public the option of self-enumeration. Furthermore, in Census caste also will be enumerated. This process will involve about 35 lakh field functionaries. The coordinated efforts and monitoring at State level will be the key to success of this task of national importance. Hence it has been proposed to constitution of a State Level Census Co-ordination Committee (SLCCC) Under the Chairmanship of the Chief Secretary to Government and various other concerned departments of the State Government as member and Director of Census Operations as Convenor.

In this regard Government has felt it is necessary to constitute a State Level Census Co-ordination Committee (SLCCC) Under the Chairmanship of the Chief Secretary to Government for Co-ordination and monitoring the 2027 Census works. Accordingly the following orders;

Government Order No: RD 256 TNR 2025,
Bengaluru; Dated:12.08.2025.

As explained in the Preamble, Government is pleased to constitute a State Level Census Co-ordination Committee (SLCCC) in connection with the work of the 2027 Census, with immediate effect. The Committee shall comprise of the following members;

Sl. No.,	Designation	Post
1	The Chief Secretary to Government of Karnataka.	Chairman
2	The Additional Chief Secretary to Government of Karnataka.	Member
3	The Additional Chief Secretary to Government, Home Department.	Member
4	The Additional Chief Secretary to Government, Urban Development Department.	Member
5	The Additional Chief Secretary to Government, Forest, Ecology and Environment Department.	Member
6	The Principal Secretary to Government, Finance Department.	Member
7	The Principal Secretary to Government, School Education and Literacy Department.	Member
8	The Principal Secretary to Government, Social Welfare Department.	Member
9	The Principal Secretary to Government, Information Technology, Biotechnology and Science & Technology Department.	Member
10	The Principal Secretary to Government, Planning Department.	Member
11	The Principal Secretary to Government, Revenue Department (Disaster Management).	Member
12	The Secretary to Government, Higher Education Department.	Member
13	The Secretary to Government, Transport Department.	Member
14	The Secretary to Government, Rural Development & Panchayat Raj Department.	Member
15	The Regional Commissioners of Bengaluru, Mysuru, Belagavi and Kalaburagi Revenue Divisions.	Member

16	The Nodal Officers of Air Force, Navy and Army (To be nominated by the Ministry of Defense)	Member
17	The Director of Census Operations, Karnataka, Bengaluru.	Convenor

The Committee shall meet at least once in three months to review and co-ordinate the work related to the 2027 Census at different stages, keeping in view of the guidelines and instructions issued by the Registrar General and Census Commissioner, India, Ministry of Home Affairs, New Delhi.

The Committee may, if it so desires, nominate any person(s) as its member(s)

By Order and in the name of the
Governor of Karnataka

(MUKTHAR PASH H.G)
Under Secretary to Government,
Revenue Department
(Disaster Management & Services-3)

PR-224

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಬೆಂಗಳೂರು ನಗರ ಜಿಲ್ಲೆ, ಮೈಸೂರು ರಸ್ತೆ ಬ್ಯಾಟರಾಯನಪುರದಲ್ಲಿರುವ ಶ್ರೀ ಗಾಳಿ ಆಂಜನೇಯಸ್ವಾಮಿ ದೇವಾಲಯ ಘೋಷಿತ ಸಂಸ್ಥೆಯನ್ನಾಗಿ ಘೋಷಿಸುವ ಕುರಿತು.

ಓದಲಾಗಿದೆ:- ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಕಡತ ಸಂಖ್ಯೆ: HRICE-ADM0ADM8/250/2024-ADMTEM-HRICE (1543423)

* * * **

ಪ್ರಸ್ತಾವನೆ:-

ಮೇಲೆ ಓದಲಾದ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಕಡತದಲ್ಲಿನ ಪ್ರಸ್ತಾವನೆಯಲ್ಲಿ ಬೆಂಗಳೂರು ನಗರ ಜಿಲ್ಲೆ, ಮೈಸೂರು ರಸ್ತೆ ಬ್ಯಾಟರಾಯನಪುರದಲ್ಲಿರುವ ಶ್ರೀ ಗಾಳಿ ಆಂಜನೇಯಸ್ವಾಮಿ ದೇವಾಲಯದಲ್ಲಿ ಹುಂಡಿ ಪರ್ಕಾವಣೆ ಸಂದರ್ಭದಲ್ಲಿ ಸಿ.ಸಿ.ಟಿ.ವಿ.ಯಲ್ಲಿ ಸೆರೆಯಾಗಿರುವ ದೇವಾಲಯದ ಸಿಬ್ಬಂದಿಗಳಿಂದಲೇ ಕಳ್ಳತನವಾಗಿರುವ ದೃಶ್ಯದ ತುಣುಕಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವುದು, ಸದರಿ ದೇವಾಲಯದಲ್ಲಿ ಆಡಳಿತ ನಿರ್ವಹಣೆಯನ್ನು ಅವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸಲಾಗುತ್ತಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಸದರಿ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಸೆಕ್ಷನ್ 42 ಮತ್ತು 43ರ ಅನ್ವಯ ಸರ್ಕಾರದ ವಶಕ್ಕೆ ಪಡೆಯುವ ಸಂಬಂಧ ಸ್ಪಷ್ಟ ಅಭಿಪ್ರಾಯದ ವರದಿಯನ್ನು ಸಲ್ಲಿಸುವಂತೆ ಆಯುಕ್ತರು,

ಧಾರ್ಮಿಕ ದತ್ತಿ ಇಲಾಖೆ ಇವರು ದಿನಾಂಕ:01.10.2024ರಂದು ಜಿಲ್ಲಾಧಿಕಾರಿಯವರನ್ನು ಕೋರಲಾಗಿರುತ್ತದೆ.

ಅದರಂತೆ, ಅಪರ ಜಿಲ್ಲಾಧಿಕಾರಿಗಳು ಮತ್ತು ಉಪ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು ಜಿಲ್ಲೆ ಇವರು ಪತ್ರ ಸಂಖ್ಯೆ: BUDC-DVS0TEMP/393/2024-DVS-BUR-DC OFFICE, ದಿನಾಂಕ:25.04.2025ರಲ್ಲಿ ಪ್ರಸ್ತಾಪಿತ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಸೆಕ್ಷನ್ 42 ಮತ್ತು 43ರ ಘೋಷಿತ ಸಂಸ್ಥೆಯನ್ನಾಗಿ ಘೋಷಿಸಿ ಸರ್ಕಾರದ ವಶಕ್ಕೆ ಪಡೆಯುವ ವಿಚಾರದ ಬಗ್ಗೆ ಅಪರ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ, ಕಾಯ್ದೆಯ ಕಲಂ 43(6)ರಡಿಯಲ್ಲಿ ವಿಚಾರಣೆಯನ್ನು ನಡೆಸಿ ವಿಚಾರಣಾ ವರದಿಯನ್ನು ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರಿಗೆ ಸಲ್ಲಿಸಿರುತ್ತಾರೆ.

ಸದರಿ ವಿಚಾರಣಾ ವರದಿಯಲ್ಲಿ ಬೆಂಗಳೂರು ನಗರ ಜಿಲ್ಲೆ, ಮೈಸೂರು ರಸ್ತೆ ಬ್ಯಾಟರಾಯನಪುರದಲ್ಲಿ ಶ್ರೀ ಗಾಳಿ ಆಂಜನೇಯಸ್ವಾಮಿ ದೇವಾಲಯಕ್ಕೆ ಲಕ್ಷಾಂತರ ರೂಪಾಯಿ ಆದಾಯ ಬರುತ್ತಿದ್ದು, ಆದರೆ ಸದರಿ ಟ್ರಸ್ಟ್ ನ ಪದಾಧಿಕಾರಿ ಹೊಂದಾಣಿಕೆ ಇಲ್ಲದೇ ಇರುವುದು ಹಾಗೂ ದೇವಾಲಯಕ್ಕೆ ಲಕ್ಷಾಂತರ ರೂಪಾಯಿ ಆದಾಯ ಬರುತ್ತಿದ್ದು, ಪ್ರತಿ ವರ್ಷ ಉಳಿತಾಯವಿಲ್ಲದೇ ವೆಚ್ಚ ಮಾಡಲಾಗುತ್ತಿದೆ, ಇದರಿಂದ ದೇವಸ್ಥಾನದ ಹಣವು ದುರುಪಯೋಗವಾಗುತ್ತಿರುವುದು ಸ್ಪಷ್ಟವಾಗಿ ಕಂಡುಬಂದಿದೆ. ಅಲ್ಲದೇ ಆದಾಯ ವೆಚ್ಚಕ್ಕೆ ಸಂಬಂಧಿಸಿದಂತೆ ಕಳೆದ 25 ವರ್ಷಗಳಿಂದ ಯಾವುದೇ ದಾಖಲೆಗಳನ್ನು ಇಡದೇ ಸಹಾಯಕ ಆಯುಕ್ತರು ಮುಜರಾಯಿ ಇಲಾಖೆ ಇವರು ನೋಟೀಸ್ ನೀಡಿದ ನಂತರ ದಾಖಲೆಗಳನ್ನು ಸೃಷ್ಟಿಸಿರುವುದು ಕಂಡು ಬರುತ್ತದೆ ಹಾಗೂ ಹುಂಡಿಯಲ್ಲಿ ದೇವಾಲಯದ ಸಿಬ್ಬಂದಿಗಳು ಹುಂಡಿ ಹಣ ಕದ್ದಿರುವ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರವಾಗಿ ದೇವಾಲಯದ ಮತ್ತು ಭಕ್ತಾಧಿಗಳ ಧಾರ್ಮಿಕ ಭಾವನೆಗಳಿಗೆ ಕುಂದು ಉಂಟು ಮಾಡಲಾಗಿರುತ್ತದೆ. ಆದ್ದರಿಂದ ಸಾರ್ವಜನಿಕ ಹಾಗೂ ಭಕ್ತಾಧಿಗಳ ಹಿತದೃಷ್ಟಿಯಿಂದ ಶ್ರೀ ಗಾಳಿ ಆಂಜನೇಯಸ್ವಾಮಿ ದೇವಾಲಯವನ್ನು ಕಾಯ್ದೆ 1997ರ ಸೆಕ್ಷನ್ 42 ಮತ್ತು 43ರಡಿಯಲ್ಲಿ ಸರ್ಕಾರದ ವಶಕ್ಕೆ ಪಡೆಯುವುದು ಸೂಕ್ತವಾಗಿರುತ್ತದೆ ಎಂಬ ಅಭಿಪ್ರಾಯದ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.

ಸದರಿ ವರದಿಯಂತೆ, ಸಾರ್ವಜನಿಕ ಹಾಗೂ ಭಕ್ತಾಧಿಗಳ ಹಿತದೃಷ್ಟಿಯಿಂದ ಶ್ರೀ ಗಾಳಿ ಆಂಜನೇಯಸ್ವಾಮಿ ದೇವಾಲಯವನ್ನು ಕಾಯ್ದೆ 1997ರ ಸೆಕ್ಷನ್ 42 ಮತ್ತು 43ರಡಿಯಲ್ಲಿ ಸರ್ಕಾರದ ವಶಕ್ಕೆ ಪಡೆಯುವುದು ಸೂಕ್ತವಾಗಿರುತ್ತದೆ ಎಂದು ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಕಂಇ 39 ಮುಆಬಿ 2025,</u>
<u>ಬೆಂಗಳೂರು, ದಿನಾಂಕ:08ನೇ ಜೂನ್ 2025</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ನಗರ ಜಿಲ್ಲೆ, ಮೈಸೂರು ರಸ್ತೆ ಬ್ಯಾಟರಾಯನಪುರದಲ್ಲಿರುವ ಶ್ರೀ ಗಾಳಿ ಆಂಜನೇಯಸ್ವಾಮಿ ದೇವಾಲಯವನ್ನು

ಅವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸುತ್ತಿರುವುದು ಮತ್ತು ಹಣ ದುರುಪಯೋಗಪಡಿಸಿಕೊಂಡಿರುವುದು, ಟ್ರಸ್ಟ್ ನಿರ್ವಹಣೆಯಲ್ಲಿ ಪಾರದರ್ಶಕತೆ ಇಲ್ಲದಿರುವುದು ಕಂಡುಬಂದಿರುವ ಹಿನ್ನೆಲೆಯಲ್ಲಿ, ಪ್ರಸ್ತಾಪಿತ ದೇವಾಲಯವನ್ನು "ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ ಕಲಂ ಸೆಕ್ಷನ್ 42 ಮತ್ತು 43ರನ್ವಯ **"ಘೋಷಿತ ಸಂಸ್ಥೆ"** ಎಂದು ಘೋಷಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮಾಲಾ ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಧಾರ್ಮಿಕ ದತ್ತಿ)

PR-225

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 39 ಮುಆಬಿ 2025

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:19.07.2025.

ತಿದ್ದುಪಡಿ ಆದೇಶ

ಬೆಂಗಳೂರು ನಗರ ಜಿಲ್ಲೆ, ಮೈಸೂರು ರಸ್ತೆ ಬ್ಯಾಟರಾಯನಪುರದಲ್ಲಿರುವ ಶ್ರೀ ಗಾಳಿ ಆಂಜನೇಯಸ್ವಾಮಿ ದೇವಾಲಯವನ್ನು ಘೋಷಿತ ಸಂಸ್ಥೆಯನ್ನಾಗಿ ಘೋಷಿಸಿ ಆದೇಶಿಸಿರುವ ಸರ್ಕಾರದ ಆದೇಶ ಸಂಖ್ಯೆ: ಕಂಇ 39 ಮುಆಬಿ 2025, ದಿನಾಂಕ 08ನೇ ಜೂನ್ 2025ರಲ್ಲಿ ಆದೇಶದ "ದಿನಾಂಕ:08ನೇ ಜೂನ್ 2025" ಎಂದಿರುವುದನ್ನು "ದಿನಾಂಕ 08ನೇ ಜುಲೈ 2025" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಮುಂದುವರೆದು, ಮೂಲ ಆದೇಶದಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮಾಲಾ ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಧಾರ್ಮಿಕ ದತ್ತಿ)

PR-226

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಉಡುಪಿ ಜಿಲ್ಲೆ, ಹೆಬ್ರಿ ತಾಲ್ಲೂಕು, ನಂದಲು ಶ್ರೀ ದುರ್ಗಾಪರಮೇಶ್ವರಿ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆಯ ಕಲಂ 42 ರನ್ವಯ ಘೋಷಿತ ಸಂಸ್ಥೆಯನ್ನಾಗಿ ಘೋಷಿಸುವ ಕುರಿತು.

ಓದಲಾಗಿದೆ:- ಪತ್ರ ಸಂಖ್ಯೆ: HRICE-ADM0ADM8/194/2023, E-1191548,ದಿ:10.03.2025.

* * * **

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿನ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪ್ರಸ್ತಾವನೆಯಲ್ಲಿ ಉಡುಪಿ ಜಿಲ್ಲೆ, ಹೆಬ್ರಿ ತಾಲೂಕು, ನಡ್ಪಾಲು ಗ್ರಾಮದ, ಸೀತಾನದಿ ನಂದಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನವು ಸರ್ಕಾರಿ ಜಾಗದಲ್ಲಿ ನೆಲೆಯಾಗಿದ್ದು, ಇತ್ತೀಚಿನ ದಿನಗಳಲ್ಲಿ ಅದರ ರೂಢಿಗತ ಹಾಗೂ ಹಕ್ಕುಳ್ಳ ಆಡಳಿತ ಮೊಕ್ತೇಸರರು ದೇವಾಲಯದ ಆಡಳಿತದ ವಿಷಯಗಳಲ್ಲಿ ತೀವ್ರ ಹಸ್ತಕ್ಷೇಪ ಮಾಡಿ ಯಾವುದೇ ಸಮಿತಿ ರಚನೆಗೆ ಅವಕಾಶ ಕೊಡದೆ, ದೇವಾಲಯಕ್ಕೆ ಬಂದ ಎಲ್ಲಾ ಧನ ಸಹಾಯದ ಲೆಕ್ಕಾಚಾರದ ಬಗ್ಗೆ ನಿಖರ ದಾಖಲೆಯನ್ನು ಇಟ್ಟುಕೊಳ್ಳದೇ ಇದರ ದುರುಪಯೋಗ ಕಂಡುಬಂದಿದ್ದು, ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ:3961/2023 ರಲ್ಲಿ ದೇವಸ್ಥಾನವನ್ನು ಸರ್ಕಾರಕ್ಕೆ ಹಸ್ತಾಂತರಿಸಬೇಕಾಗಿ ಪ್ರಾರ್ಥಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯದ ರಿಟ್‌ಪಿಟಿಷನ್ ಸಂಖ್ಯೆ:3961/2023 ದಿನಾಂಕ:22.05.2023ರ ಆದೇಶದಂತೆ ಮುಂದಿನ ಕ್ರಮವಹಿಸುವಂತೆ ಆದೇಶಿಸಲಾಗಿರುತ್ತದೆ.

ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನವು ನಾಡ್ಪಾಲು ಸರ್ವೆ ನಂ.62/6 ರಲ್ಲಿ 52 ಗುಂಟೆ ಜಾಗದಲ್ಲಿರುವುದು ಆರ್.ಟಿ.ಸಿ ಗಳಿಂದ ವ್ಯಕ್ತವಾಗಿದ್ದು, ದೇವಸ್ಥಾನಕ್ಕೆ ಸಾರ್ವಜನಿಕರು ಸಾಕಷ್ಟು ಪ್ರಮಾಣದಲ್ಲಿ ದೇಣಿಗೆ ನೀಡಿರುವುದು ದೂರುದಾರರು ಹಾಜರ್ ಪಡಿಸಿದ ದಾನಿಗಳ ಯಾದಿಗಳಿಂದ ಕಂಡು ಬಂದಿದ್ದು, ಇದು ಸಾರ್ವಜನಿಕ ದೇವಸ್ಥಾನವಾಗಿರುತ್ತದೆ ಎನ್ನುವುದು ಸ್ಪಷ್ಟವಾಗಿದ್ದು, ದೇವಸ್ಥಾನದ ಆಡಳಿತವು ವ್ಯವಸ್ಥಿತವಾಗಿ ನಡೆದಿರುವುದಿಲ್ಲ ಎನ್ನುವುದು ದಾಖಲೆಗಳಿಂದ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಈ ದೇವಸ್ಥಾನದ ಆಡಳಿತವು ಅವ್ಯವಸ್ಥೆಯ ರೀತಿಯಲ್ಲಿ ನಡೆದಿರುವುದು ಮೇಲ್ನೋಟಕ್ಕೆ ಕಂಡುಬರುವುದಾಗಿ ತಿಳಿದುಬಂದಿರುವುದರಿಂದ ಪ್ರಸ್ತಾಪಿತ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಸೆಕ್ಷನ್ 42 ಮತ್ತು 43ರನ್ವಯ" ಘೋಷಿತ ಸಂಸ್ಥೆಯನ್ನಾಗಿ ಘೋಷಿಸಿ ಸರ್ಕಾರದ ವಶಕ್ಕೆ ಪಡೆಯುವ ಬಗ್ಗೆ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ, ಉಡುಪಿ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಜಿಲ್ಲಾಧಿಕಾರಿಯವರ ವರದಿಯ ಮೇರೆಗೆ ಈ ಪ್ರಾಧಿಕಾರವು ಪ್ರಸ್ತಾಪಿತ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಅಧ್ಯಾಯ-8ರ ಉಪಬಂಧಗಳಿಗೆ ಒಳಪಡುತ್ತದೆ ಎಂದು ಏಕೆ ಘೋಷಿಸಬಾರದೆಂಬುದಕ್ಕೆ ಕಾರಣ ತೋರಿಸುವಂತೆ ಸದರಿ ದೇವಾಲಯದ ಅಧ್ಯಕ್ಷರು/ ಕಾರ್ಯದರ್ಶಿಯರಿಗೆ ದಿನಾಂಕ:18.10.2023 ರಂದು ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗಿರುತ್ತದೆ.

ಸದರಿ ಕಾರಣ ಕೇಳಿ ನೋಟೀಸಿಗೆ ಲಿಖಿತ ಹೇಳಿಕೆಯಲ್ಲಿ ಪ್ರಸ್ತಾಪಿತ ದೇವಸ್ಥಾನವನ್ನು ಸರ್ಕಾರದ ವಶಕ್ಕೆ ಪಡೆಯುವಂತೆ ಕೋರಿ ಸಲ್ಲಿಸಿರುವ ದೂರುಗಳು ಸತ್ಯಕ್ಕೆ ದೂರವಾಗಿದ್ದು, ಸದರಿ ದೇವಾಲಯದಲ್ಲಿ ಯಾವುದೇ ಅವ್ಯವಹಾರಗಳಾಗಲೀ, ಹಣ ದುರುಪಯೋಗವಾಗಲೀ ನಡೆದಿರುವುದಿಲ್ಲವಾದರಿಂದ ಸದರಿ ದೂರುಗಳನ್ನು ಪರಿಗಣಿಸಬಾರದೆಂದು

ದಿನಾಂಕ:22.11.2023ರ ಪತ್ರದಲ್ಲಿ ಶ್ರೀಮತಿ ಎಸ್.ಮನೋರಮ ಶೆಟ್ಟಿ, ಅನುವಂಶಿಕ ಆಡಳಿತ ಮೊಕ್ತೇಸರರು, ಶ್ರೀ ದುರ್ಗಪರಮೇಶ್ವರಿ ದೇವಾಲಯ, ನಂದಲು ಸೀತಾನದಿ, ಹೆಬ್ರಿ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಕೋರಿರುತ್ತಾರೆ.

ಸದರಿ ದೇವಳವು ಹೆಬ್ರಿ ತಾಲೂಕಿನ ಸರ್ವೆ ನಂ 62/1 ರಲ್ಲಿ 0.52 ಎಕರೆ ಸರಕಾರದ ಜಾಗದಲ್ಲಿದ್ದು, ದೇವಳದ ಜೀರ್ಣೋದ್ಧಾರದ ಸಮಯದಲ್ಲಿ ಸಾರ್ವಜನಿಕರಿಂದ ದೇಣಿಗೆ ಪಡೆದಿರುವುದರಿಂದ, ದೇವಸ್ಥಾನದ ವ್ಯವಹಾರಗಳನ್ನು ಸಾರ್ವಜನಿಕರ ಗಮನಕ್ಕೆ ತಂದು ಪಾರದರ್ಶಕವಾಗಿ ಆಡಳಿತ ನಡೆಸಬೇಕಾಗಿರುತ್ತದೆ. ಆದರೆ ದೇವಸ್ಥಾನದವರು ಪಾರದರ್ಶಕವಾಗಿ ವ್ಯವಹರಿಸಿರುವುದು ಕಂಡುಬರುವುದಿಲ್ಲ. ದೇವಸ್ಥಾನದಲ್ಲಿ ಸಾರ್ವಜನಿಕ ಭಕ್ತಾಧಿಗಳಿಗೆ ಸೇವೆ ಸಲ್ಲಿಸಲು ಯಾವುದೇ ತೊಂದರೆ ಆಗದಂತೆ ಮುಕ್ತ ಅವಕಾಶ ನೀಡುವ ನಿಟ್ಟಿನಲ್ಲಿ ಪ್ರತಿವಾದಿಯವರಾದ ಶ್ರೀಮತಿ ಮನೋರಮಾ ಶೆಟ್ಟಿಯವರ ಕುಟುಂಬಸ್ಥರು ಹಲವಾರು ವರ್ಷಗಳಿಂದ ದೇವಸ್ಥಾನದ ಎಲ್ಲಾ ಧಾರ್ಮಿಕ ಕಾರ್ಯಗಳನ್ನು ಹಿಂದಿನಿಂದಲೂ ಆಡಳಿತ ಮೊಕ್ತೇಸರರಾಗಿ ನೋಡಿಕೊಂಡು ಬಂದಿರುವುದರಿಂದ ಮುಂದೆಯೂ ಸಹ ದೇವಳದ ಎಲ್ಲಾ ಧಾರ್ಮಿಕ ಕಾರ್ಯವನ್ನು ಮಾತ್ರ ನಡೆಸಿಕೊಂಡು ಹೋಗುವಂತೆ ಪ್ರತಿವಾದಿಯವರಿಗೆ ಸೂಚಿಸಿ, ಮಾನ್ಯ ನ್ಯಾಯಾಲಯದ ಒ.ಎಸ್. ಸಂಖ್ಯೆ:122/2022ರ ಪ್ರಕರಣದಲ್ಲಿಯ ಅಂತಿಮ ತೀರ್ಪಿಗೊಳಪಟ್ಟು ಪ್ರಸ್ತಾಪಿತ ದೇವಾಲಯವನ್ನು "ಕಾಯ್ದೆಯ ಸೆಕ್ಷನ್ 42ರಂತೆ ಅಧಿನಿಯಮದ ಅಧ್ಯಾಯ 8ರ ನಿಯಂತ್ರಣಕ್ಕೆ ಒಳಪಡಿಸುವುದು ಸೂಕ್ತವೆಂಬುದು ಅಪರ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ರವರು ದಿನಾಂಕ:01.03.2024ರ ವಿಚಾರಣಾ ವರದಿಯ ಸಾರಾಂಶವಾಗಿರುತ್ತದೆ.

ಅಪರ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ, ಉಡುಪಿ ಇವರು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಸೆಕ್ಷನ್ 43(6)ರ ಅಡಿಯಲ್ಲಿ ದಿನಾಂಕ:01.03.2024ರಂದು ವಿಚಾರಣೆ ನಡೆಸಿ, ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಿ ಪ್ರಸ್ತಾಪಿತ ದೇವಾಲಯವನ್ನು ಘೋಷಿತ ಸಂಸ್ಥೆಯೆಂದು ಘೋಷಿಸುವ ವಿಚಾರದಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಸೆಕ್ಷನ್ 43(6)ರ ಅಡಿಯಲ್ಲಿ ಈ ಪ್ರಾಧಿಕಾರವೇ ಮತ್ತೊಮ್ಮೆ ವಿಚಾರಣೆಯನ್ನು ನಡೆಸಲು ತೀರ್ಮಾನಿಸಿ, ವಿಚಾರಣೆಯನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ.

ಈ ಪ್ರಕರಣದಲ್ಲಿ ಉಭಯ ಪಕ್ಷಕಾರರಿಗೆ ದಿನಾಂಕ:21.06.2024ರ ವಿಚಾರಣಾ ನೋಟೀಸ್ ಜಾರಿ ಮಾಡಿ ತಮ್ಮ ಆಕ್ಷೇಪಣೆ/ಅಹವಾಲುಗಳನ್ನು ಪೂರಕ ದಾಖಲೆಗಳೊಂದಿಗೆ ಸಲ್ಲಿಸಲು ತಿಳಿಸಿ, ನಂತರದಲ್ಲಿ ದಿನಾಂಕ:02.07.2024, 11.07.2024, 24.10.2024, 21.11.2024 14.11.2024 ಮತ್ತು ದಿನಾಂಕ:26.12.2024ರಂದು ವಿಚಾರಣೆ ನಡೆಸಿ ಸಂಬಂಧಪಟ್ಟ ದಾಖಲೆಗಳನ್ನು ಪಡೆಯಲಾಗಿರುತ್ತದೆ. **ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 42 ಮತ್ತು 43ರ ಅಡಿಯಲ್ಲಿ ಯಾವುದೇ ಹಿಂದೂ ಧಾರ್ಮಿಕ ಸಂಸ್ಥೆಯನ್ನು ಅವ್ಯವಸ್ಥಿತ ರೀತಿಯಲ್ಲಿ ನಡೆಸಲಾಗುತ್ತಿದೆ ಎಂದು ಮನಗಂಡರೆ, ಅಂತಹ ಸಂಸ್ಥೆಯನ್ನು ಘೋಷಿತ ಸಂಸ್ಥೆಯೆಂದು ಘೋಷಿಸಿ, ಸರ್ಕಾರದ ನಿಯಂತ್ರಣಕ್ಕೆ ಒಳಪಡಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.**

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ, ವಾದ ಪ್ರತಿವಾದಗಳನ್ನು ಆಲಿಸಿ, ವಿಶ್ಲೇಷಿಸಿ ಉಡುಪಿ ಜಿಲ್ಲೆ, ಹೆಬ್ರಿ ತಾಲೂಕು, ನಡ್ಪಾಲು ಗ್ರಾಮದ, ಸೀತಾನದಿ ನಂದಲು ಶ್ರೀ ದುರ್ಗಾಪರಮೇಶ್ವರಿ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 42 ಮತ್ತು 43ರ ಅಡಿಯಲ್ಲಿ ಘೋಷಿತ ಸಂಸ್ಥೆಯೆಂದು ಘೋಷಿಸುವುದು ಸೂಕ್ತವೆಂದು ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ರವರು ಕಾಯ್ದೆಯ ಸೆಕ್ಷನ್ 43(6)ರ ಅಡಿ ವಿಚಾರಣೆ ನಡೆಸಿದ್ದು, ವಿಚಾರಣಾ ವರದಿಯಲ್ಲಿ ಉಡುಪಿ ಜಿಲ್ಲೆ,

ಕುಂದಾಪುರ ತಾಲ್ಲೂಕು, ವಂಡ್ಸೆ ಹೋಬಳಿ ತಲ್ಲೂರು ಗ್ರಾಮದ ಶ್ರೀ ಮಹಾದೇವಿ ಕುಂತಿಯಮ್ಮ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಸೆಕ್ಷನ್ 42 ಮತ್ತು 43ರನ್ವಯ ಸರ್ಕಾರದ ವಶಕ್ಕೆ ಪಡೆದುಕೊಳ್ಳುವ ಬಗ್ಗೆ ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ.

"ಸಾರ್ವಜನಿಕ ಹಿತದೃಷ್ಟಿಯನ್ನು ಪರಿಗಣಿಸಿ, ಉಡುಪಿ ಜಿಲ್ಲೆ, ಹೆಬ್ರಿ ತಾಲೂಕು, ನಡ್ಸಾಲು ಗ್ರಾಮದ, ಸೀತಾನದಿ ನಂದಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಮತ್ತು ಅದಕ್ಕೆ ಸಂಬಂಧಿಸಿದ ಇತರೆ ಎಲ್ಲಾ ಚರ-ಸ್ಥಿರ ಸ್ವತ್ತುಗಳ ಸಹಿತವಾಗಿ ಹಿಂದೂ ಧಾರ್ಮಿಕ ಸಂಸ್ಥೆಯನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 42 ಮತ್ತು 43 ರಂತೆ ಸದರಿ ಅಧಿನಿಯಮದ ಅಧ್ಯಾಯ-8ರ ನಿಯಂತ್ರಣಕ್ಕೆ ಒಳಪಡಿಸಿ, ಘೋಷಿತ ಸಂಸ್ಥೆಯೆಂದು ಘೋಷಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ."

ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಕಂಇ 32 ಮುಆಬಿ 2025,</u>
<u>ಬೆಂಗಳೂರು, ದಿನಾಂಕ: 04 ನೇ ಜೂನ್ 2025.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಉಡುಪಿ ಜಿಲ್ಲೆ, ಹೆಬ್ರಿ ತಾಲೂಕು, ನಡ್ಸಾಲು ಗ್ರಾಮದ, ಸೀತಾನದಿ ನಂದಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನವನ್ನು ಅವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸುತ್ತಿರುವುದು ಮತ್ತು ಹಣ ದುರುಪಯೋಗ ಪಡಿಸಿಕೊಂಡಿರುವುದು, ಟ್ರಸ್ಟ್ ನಿರ್ವಹಣೆಯಲ್ಲಿ ಪಾರದರ್ಶಕತೆ ಇಲ್ಲದಿರುವುದು ಕಂಡುಬಂದಿರುವ ಹಿನ್ನೆಲೆಯಲ್ಲಿ, ಪ್ರಸ್ತಾಪಿತ ದೇವಾಲಯವನ್ನು "ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ ಕಲಂ ಸೆಕ್ಷನ್ 42 ಮತ್ತು 43ರನ್ವಯ "**ಘೋಷಿತ ಸಂಸ್ಥೆ**" ಎಂದು ಘೋಷಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮಾಲಾ ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಧಾರ್ಮಿಕ ದತ್ತಿ)

PR-227

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕು, ಮಂಡಿಕಲ್ಲು ಹೋಬಳಿ, ಯರಮಾರೇನಹಳ್ಳಿ ಗ್ರಾಮದ ಸ.ನಂ 187 ರಲ್ಲಿ 4-38 ಎಕರೆ/ಗುಂಟೆ ಮತ್ತು ಸ.ನಂ 191 ರಲ್ಲಿ 0-25 ಗುಂಟೆ ಒಟ್ಟು 5-23 ಎಕರೆ/ಗುಂಟೆ ಜಮೀನನ್ನು ಅಕ್ಷಯ ಪಾತ್ರೆ ಅಡುಗೆ ಮನೆ ಮತ್ತು ಆರ್ಥಿಕ ಹಾಗೂ ಸಾಮಾಜಿಕ ಹಿಂದುಳಿದ ಗ್ರಾಮೀಣ ಮಕ್ಕಳಿಗೆ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಅಧ್ಯಕ್ಷರು, ಇಸ್ಕಾನ್ ಬೆಂಗಳೂರುರವರಿಗೆ ಮಂಜೂರು ಮಾಡುವ ಕುರಿತು.

ಓದಲಾಗಿದೆ:
1. ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆರವರ ಪತ್ರ ಸಂಖ್ಯೆ:ಎಲ್ಎನ್ಡಿ/ಸಿಆರ್/86/2023-24, ದಿನಾಂಕ:23.07.2024
2. ಪ್ರಾದೇಶಿಕ ಆಯುಕ್ತರು ಬೆಂಗಳೂರು ವಿಭಾಗರವರ ಪತ್ರ ಸಂಖ್ಯೆ: ಆರ್ ಸಿ ಬಿ/ಎಲ್ ಎನ್ ಡಿ/ಸಿಆರ್ /31/2024-25 ದಿನಾಂಕ:16.08.2024.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ.(1) ರ ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆರವರ ಪತ್ರದಲ್ಲಿ ಇಸ್ಕಾನ್ ಸಂಸ್ಥೆ, ಬೆಂಗಳೂರುರವರು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದ ಗ್ರಾಮೀಣ ಮಕ್ಕಳಿಗಾಗಿ ಶಾಲೆಯನ್ನು ನಡೆಸಲು ಉದ್ದೇಶಿಸಿರುವುದರಿಂದ ಚಿಕ್ಕಬಳ್ಳಾಪುರ ತಾಲ್ಲೂಕು, ಮಂಡಿಕಲ್ಲು ಹೋಬಳಿ, ಯರ್ರಮಾರೇನಹಳ್ಳಿ ಗ್ರಾಮದ ಸ.ನಂ.187 ರಲ್ಲಿ 4-38 ಎಕರೆ ಮತ್ತು ಸ.ನಂ.191 ರಲ್ಲಿ 0-25 ಗುಂಟೆ ಒಟ್ಟು 5-23 ಎಕರೆ/ಗುಂಟೆ ಜಮೀನನ್ನು ಅಕ್ಷಯ ಪಾತ್ರೆ ಅಡುಗೆ ಮನೆ ಮತ್ತು ಆರ್ಥಿಕ ಹಾಗೂ ಸಾಮಾಜಿಕ ಹಿಂದುಳಿದ ಗ್ರಾಮೀಣ ಮಕ್ಕಳಿಗೆ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರು ಮಾಡುವಂತೆ ಕೋರಿ ಮಾನ್ಯ ಕಂದಾಯ ಸಚಿವರು ಮತ್ತು ಉನ್ನತ ಶಿಕ್ಷಣ ಸಚಿವರಿಗೆ ಹಾಗೂ ಮಾನ್ಯ ಶಾಸಕರು, ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರ ಇವರಿಗೆ ಮನವಿ ಸಲ್ಲಿಸಿರುತ್ತಾರೆ.

ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕು, ಮಂಡಿಕಲ್ಲು ಹೋಬಳಿ, ಯರಮಾರೇನಹಳ್ಳಿ ಗ್ರಾಮದ ಸ.ನಂ 187 ರಲ್ಲಿ ಆರ್.ಟಿ.ಸಿಯಂತೆ ಒಟ್ಟು ವಿಸ್ತೀರ್ಣ 5-13 ಎಕರೆ/ಗುಂಟೆ ಜಮೀನಿದ್ದು, ಈ ಪೈಕಿ ಬಿ ಬರಾಬು 0-15 ಎಕರೆ/ಗುಂಟೆ ಜಾತ ಉಳಿಕೆ 4-38 ಎಕರೆ/ಗುಂಟೆ ಜಮೀನು "ಸರ್ಕಾರಿ ಬೀಳು" ಎಂಬುದಾಗಿ ವರ್ಗೀಕರಣಗೊಂಡಿರುತ್ತದೆ ಮತ್ತು ಯರಮಾರೇನಹಳ್ಳಿ ಗ್ರಾಮದ ಸ.ನಂ 191 ರಲ್ಲಿ ಆರ್.ಟಿ.ಸಿಯಂತೆ ಒಟ್ಟು ವಿಸ್ತೀರ್ಣ 0-28 ಎಕರೆ/ಗುಂಟೆ ಜಮೀನಿದ್ದು, ಈ ಪೈಕಿ ಬಿ ಖರಾಬು 0-03 ಎಕರೆ/ಗುಂಟೆ ಜಾತ ಉಳಿಕೆ 0-25 ಎಕರೆ/ಗುಂಟೆ ಜಮೀನು ಸರ್ಕಾರಿ ಬೀಳು ಎಂಬುದಾಗಿ ವರ್ಗಿಕರಣಗೊಂಡಿರುತ್ತದೆ.ಸದರಿ ಜಮೀನು ಎಲ್ಲಾ ಋಣಭಾರಗಳಿಂದ ಮುಕ್ತವಾಗಿರುತ್ತದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಜಿಲ್ಲಾಧಿಕಾರಿಯವರು, ಚಿಕ್ಕಬಳ್ಳಾಪುರ ತಾಲ್ಲೂಕು, ಮಂಡಿಕಲ್ಲು ಹೋಬಳಿ, ಯರಮಾರೇನಹಳ್ಳಿ ಗ್ರಾಮದ ಸ.ನಂ 187 ರಲ್ಲಿ 4-38 ಎಕರೆ-ಗುಂಟೆ ಮತ್ತು ಸ.ನಂ 191 ರಲ್ಲಿ 0-25 ಗುಂಟೆ ಎರಡು ಸರ್ವೆ ನಂಬರ್ ಗಳ ಖರಾಬು ಜಮೀನನ್ನು ಹೊರತುಪಡಿಸಿ ಒಟ್ಟು 5-23 ಎಕರೆ/ಗುಂಟೆ ಜಮೀನನ್ನು ಅಕ್ಷಯ ಪಾತ್ರೆ ಅಡುಗೆ ಮನೆ ಮತ್ತು ಆರ್ಥಿಕ ಹಾಗೂ ಸಾಮಾಜಿಕ ಹಿಂದುಳಿದ ಗ್ರಾಮೀಣ ಮಕ್ಕಳಿಗೆ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಅಧ್ಯಕ್ಷರು, ಇಸ್ಕಾನ್, ಬೆಂಗಳೂರು ರವರಿಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 21 ಮತ್ತು 22ಎ(1)(i) ಕ್ರಮ ಸಂಖ್ಯೆ (4)ರಡಿ ರನ್ವಯ ಮಂಜೂರು ಮಾಡಲು ಪ್ರಸ್ತಾವನೆಯನ್ನು ಪ್ರಾದೇಶಿಕ ಆಯುಕ್ತರಿಗೆ ಕಳುಹಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2) ರ ಪ್ರಾದೇಶಿಕ ಆಯುಕ್ತರ ವರದಿಯಲ್ಲಿ ಸದರಿ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 21 ಮತ್ತು 22ಎ(1)(i) ಕ್ರಮ ಸಂಖ್ಯೆ (4) ರನ್ವಯ ಮಂಜೂರು ಮಾಡಲು ಜಿಲ್ಲಾಧಿಕಾರಿಗಳು ಚಿಕ್ಕಬಳ್ಳಾಪುರ ಜಿಲ್ಲೆ, ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಅದರಂತೆ, ಪ್ರಾದೇಶಿಕ ಆಯುಕ್ತರು ಬೆಂಗಳೂರು ವಿಭಾಗ ಮತ್ತು ಜಿಲ್ಲಾಧಿಕಾರಿಗಳು ಚಿಕ್ಕಬಳ್ಳಾಪುರ ಜಿಲ್ಲೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ. E-Comp. No.:1501179 File No.:RD-LGK/21/2024
ಬೆಂಗಳೂರು, ದಿನಾಂಕ:22.07.2025

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕು, ಮಂಡಿಕಲ್ಲು ಹೋಬಳಿ, ಯರಮಾರೇನಹಳ್ಳಿ ಗ್ರಾಮದ ಸರ್ವೆ ನಂಬರ್ ಸ.ನಂ 187 ರಲ್ಲಿ 4-38 ಎಕರೆ/ಗುಂಟೆ ಮತ್ತು ಸರ್ವೆ ನಂಬರ್ 191 ರಲ್ಲಿ 0-25 ಗುಂಟೆ ಒಟ್ಟು 5-23 ಎಕರೆ/ಗುಂಟೆ ಜಮೀನನ್ನು ಅಕ್ಷಯ ಪಾತ್ರೆ ಅಡುಗೆ ಮನೆ ಮತ್ತು ಆರ್ಥಿಕ ಹಾಗೂ ಸಾಮಾಜಿಕ ಹಿಂದುಳಿದ ಗ್ರಾಮೀಣ ಮಕ್ಕಳಿಗೆ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಅಧ್ಯಕ್ಷರು, ಇಸ್ಕಾನ್ ಬೆಂಗಳೂರು ಇವರಿಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969 ರ ನಿಯಮ 27 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು-1969ರ ನಿಯಮ 22(ಎ)(1)(i)(2)ರನ್ನು ಸಡಿಲಿಸಿ, ಪ್ರಸ್ತಾಪಿತ ಜಮೀನಿಗೆ ಪ್ರಚಲಿತ ಕೃಷಿಯೇತರ ಅಭಿವೃದ್ಧಿ ಹೊಂದಿಲ್ಲದ ಜಮೀನಿನ ಮಾರ್ಗಸೂಚಿ ಮೌಲ್ಯ ಮತ್ತು ಇನ್ನಿತರೆ ಶಾಸನಬದ್ಧ ಶುಲ್ಕಗಳನ್ನು ವಿಧಿಸಿ ಈ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರು ಮಾಡಿ ಸರ್ಕಾರವು ಆದೇಶಿಸಿದೆ.

ಷರತ್ತುಗಳು:-

1 ಮಂಜೂರಾದ ಜಮೀನು ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಎರಡು ವರ್ಷಗಳ ಅವಧಿಯೊಳಗೆ ಉಪಯೋಗಿಸತಕ್ಕದ್ದು;

2 ಸಂಸ್ಥೆಗೆ ಸದರಿ ಜಮೀನು ಅವಶ್ಯವಿಲ್ಲವೆಂದು ಕಂಡು ಬಂದಲ್ಲಿ ಕಂದಾಯ ಇಲಾಖೆಗೆ ಹಿಂದಿರುಗಿಸತಕ್ಕದ್ದು;

3 ಮಂಜೂರಾದ ಜಮೀನನ್ನು ವಿನಾಶಕಾರಿಯಾದ ಅಥವಾ ಖಾಯಂ ಆಗಿ ಹಾನಿಕಾರಕವಾಗುವ ರೀತಿಯಲ್ಲಿ ಬಳಸತಕ್ಕದ್ದಲ್ಲ ಹಾಗೂ ಯಾವುದೇ ರೀತಿಯ ಅತಿಕ್ರಮಣವಾಗದಂತೆ ಕ್ರಮವಹಿಸತಕ್ಕದ್ದು;

4 ಮಂಜೂರಾದ ಜಮೀನನ್ನು ಕಂದಾಯ ಇಲಾಖೆಯ ಅನುಮತಿ ಇಲ್ಲದೆ ಮಾರಾಟ ಮಾಡುವುದಾಗಲೀ, ಗುತ್ತಿಗೆ/ಉಪಗುತ್ತಿಗೆ ನೀಡುವುದಾಗಲೀ, ಅಡಮಾನ, ವರ್ಗಾವಣೆ, ದಾನ, ಇತರೆ ಯಾವುದೇ ರೀತಿಯ ಪರಭಾರೆಯನ್ನು ಮಾಡಬಾರದು;

5 ಮಂಜೂರಾದ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಶಾಸನಬದ್ಧವಾಗಿ ಪಡೆಯಬೇಕಾದ ಪರವಾನಗಿಗಳನ್ನು ಸಂಬಂಧಿತ ಪ್ರಾಧಿಕಾರಗಳಿಂದ ಪಡೆಯತಕ್ಕದ್ದು ಹಾಗೂ ನಿಯಾಮಾನುಸಾರ ಪಾವತಿಸಬೇಕಾದ ಎಲ್ಲಾ ರೀತಿಯ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು;

6 ಮಂಜೂರಾತಿ ಜಮೀನಿನ ಮೇಲೆ ಯಾವುದೇ ನ್ಯಾಯಾಲಯದಲ್ಲಿ ದಾವೆ ದಾಖಲಾಗಿದ್ದರೆ ಈ ಮಂಜೂರಾತಿಯು ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ;

7 ಮಂಜೂರಾದ ಜಮೀನಿನ ಯಾವುದೇ ಭಾಗವು ಸಾರ್ವಜನಿಕ ಉದ್ದೇಶಕ್ಕೆ ಅಗತ್ಯವಾಗಿದ್ದಲ್ಲಿ, ಸರ್ಕಾರವು ಸದರಿ ಜಮೀನನ್ನು ಪರಿಹಾರ ನೀಡದೇ ಹಿಂತೆಗೆದುಕೊಳ್ಳುವ ಹಕ್ಕನ್ನು ಹೊಂದಿರುತ್ತದೆ;

8 ಮಂಜೂರಾದ ಜಮೀನು 1969 ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳಿಗೆ ಬದ್ಧವಾಗಿರತಕ್ಕದ್ದು. ಸದರಿ ನಿಯಮಗಳ ಉಲ್ಲಂಘನೆಯಾದಲ್ಲಿ ಈ ಮಂಜೂರಾತಿ ಆದೇಶ ತನ್ನಷ್ಟಕ್ಕೆ ತಾನೇ ರದ್ದಾಗುವುದು ಹಾಗೂ ಯಾವುದೇ ಪರಿಹಾರ ನೀಡದೇ ಮಂಜೂರಾದ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯಲಾಗುವುದು;

9 ಮಂಜೂರಾದ ಜಮೀನನ್ನು ಹಸ್ತಾಂತರಿಸುವಾಗ ಜಮೀನಿನ ವಾಸ್ತವ ಪರಿಸ್ಥಿತಿಗಳನ್ನು ಗಮನದಲ್ಲಿರಿಸಿಕೊಂಡು ಜಿಲ್ಲಾಧಿಕಾರಿಗಳು ಪೂರಕವಾದ ಷರತ್ತುಗಳನ್ನು ವಿಧಿಸಬಹುದಾಗಿದೆ;

ಈ ಆದೇಶವನ್ನು ದಿನಾಂಕ:17.07.2025 ರಂದು ಜರುಗಿದ ಸಚಿವ ಸಂಪುಟ ಸಭೆಯ ಪ್ರಕರಣ ಸಂಖ್ಯೆ: 534/2025 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಹಾಂತಯ್ಯ ಎಸ್ ಹೊಸಮಠ.)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಂಜೂರಾತಿ-1)

PR-228

PROCEEDINGS OF GOVERNMENT OF KARNATAKA

Sub:- The Judicial Magistrate Court and proceed to investigate as per the provisions of the BNSS 173 Sub Section 3.

Read:- Letter No.CRM-3/41/2024, Date: 30.07.2025 from Director General and Inspector General of Police, Bengaluru.

PREAMBLE:

The Government of Karnataka holds that, under Sub Section 3 of Section 173 of Bharatiya Nagariak Suraksha Sanhinta, 2023 (BNSS), the Judicial Magistrate who is empowered to take cognizance on the complaint under Section 210 of BNSS, may direct the officer-in-charge of police station of his terrotorial jurisdiction to register the case and investigate. Hence, the Officer In-charge of Police Station who is directed to register the case and investigate shall register the case within 24 hours of receipt of the order from the Judicial Magistrate Court and proceed to investigate as per the provisions of the BNSS. Hence, this order is initiated to direct the police officers to take steps accordingly.

Government Order No. HD 432 SST 2025(1); Bengaluru, Dated:12.09.2025

When the Judicial Magistrate Court exercising the power under Sub Section 3 of Section 173 of Bharatiya Nagarika Suraksha Sanhita, 2023 directs the Officer In Charge of Police Station of his territorial jurisdiction to register the case and investigate the same, then such Officer -in-charge of Police Station shall register the case within 24 hours of receipt of direction of the Judicial Magistrate Court and proceed to investigate as per the provisions of the BNSS.

By Order and in the name of the
Governor of Karnataka

(NAGARAJU S.)
Under Secretary to Government,
Home Department (Law & Order)
☏:080-22033254, **e-mail**: uslo-home@karnataka.gov.in

PR-229

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗಣಿಗಾರಿಕೆಯಲ್ಲಿ ನಡೆದ ಅಕ್ರಮಗಳ ಕುರಿತು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಸಚಿವ ಸಂಪುಟ ಉಪ ಸಮಿತಿಯ ಶಿಫಾರಸ್ಸುಗಳ ಬಗ್ಗೆ ಸಚಿವ ಸಂಪುಟದ ತೀರ್ಮಾನದಂತೆ ಅನುಷ್ಠಾನಗೊಳಿಸಲು ಕ್ರಮ ವಹಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಸಂಶಾ 03 ಸಿಎಸ್‌ಸಿ 2025, ದಿನಾಂಕ:05.07.2025.
2. ಸಚಿವ ಸಂಪುಟ ಉಪ ಸಮಿತಿಯ ದಿನಾಂಕ:13.08.2025 ರ ವರದಿ.
3. ದಿನಾಂಕ:19.08.2025 ರ ಸಚಿವ ಸಂಪುಟದ ನಿರ್ಣಯ.

*****

ಪ್ರಸ್ತಾವನೆ:-

ಮೇಲೆ ಓದಲಾದ (1) ರಲ್ಲಿ ಗಣಿಗಾರಿಕೆಯಲ್ಲಿ ನಡೆದ ಅಕ್ರಮಗಳ ಕುರಿತು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಮುಖ್ಯವಾಗಿ ವಸೂಲಾತಿ ಆಯುಕ್ತರನ್ನು (Recovery Commissioner) ನೇಮಕಾತಿ ಮಾಡುವ ಬಗ್ಗೆ ಮತ್ತು ಪ್ರಕರಣಗಳ ಶೀಘ್ರ ಇತ್ಯರ್ಥಕ್ಕಾಗಿ ತ್ವರಿತ ನ್ಯಾಯಾಲಯ (Fast Track Court) ಸ್ಥಾಪಿಸುವ ಬಗ್ಗೆ ಚರ್ಚಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸಚಿವ ಸಂಪುಟದ ಉಪ ಸಮಿತಿಯನ್ನು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುತ್ತದೆ.

ಮೇಲೆ ಓದಲಾದ (2) ರಲ್ಲಿ ಸಚಿವ ಸಂಪುಟ ಉಪ ಸಮಿತಿಯು ದಿನಾಂಕ:08.07.2025, 15.07.2025 ಮತ್ತು 04.08.2025 ರಂದು ಸಭೆಗಳನ್ನು ಕರೆದು ಈ ಕೆಳಕಂಡ ಮುಖ್ಯ ವಿಷಯಗಳ ಬಗ್ಗೆ ಚರ್ಚಿಸಿ ವರದಿ ಸಲ್ಲಿಸಿರುತ್ತದೆ.

(i) ವಸೂಲಾತಿ ಆಯುಕ್ತರನ್ನು (Recovery Commissioner) ನೇಮಕಾತಿ ಮಾಡುವ ಬಗ್ಗೆ
(ii) ಪ್ರಕರಣಗಳ ಶೀಘ್ರ ಇತ್ಯರ್ಥಕ್ಕಾಗಿ ತ್ವರಿತ ನ್ಯಾಯಾಲಯ (Fast track court) ಸ್ಥಾಪಿಸುವ ಬಗ್ಗೆ
(iii) ವಿಶೇಷ ತನಿಖಾ ತಂಡ (SIT) ದಾಖಲಿಸುವ ಪ್ರಕರಣಗಳನ್ನು ನ್ಯಾಯಾಲಯಗಳಲ್ಲಿ ಸಮರ್ಥಿಸಿಕೊಳ್ಳಲು ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲು ಸಮನ್ವಯ ಸಮಿತಿ ರಚಿಸುವ ಬಗ್ಗೆ.

ಮೇಲೆ ಓದಲಾದ (3) ರಲ್ಲಿ, ಸಚಿವ ಸಂಪುಟ ಉಪ-ಸಮಿತಿಯು ದಿನಾಂಕ:13.08.2025 ರಂದು ಸಲ್ಲಿಸಿರುವ ವರದಿಯನ್ನು ಸಚಿವ ಸಂಪುಟದ ದಿನಾಂಕ:19.08.2025 ರಂದು ನಡೆದ ಸಭೆಯಲ್ಲಿ, ಶಿಫಾರಸ್ಸಿನ ಕ್ರ.ಸಂ.12 ಕ್ಕೆ ಸಂಬಂಧಿಸಿದಂತೆ, ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಂಬಂಧಿಸಿದ ವಿವಿಧ ಇಲಾಖೆ / ಪ್ರಾಧಿಕಾರಗಳ ಮುಖ್ಯಸ್ಥರನ್ನೊಳಗೊಂಡಂತೆ ಮೇಲುಸ್ತುವಾರಿ ಸಮಿತಿಯನ್ನು ರಚಿಸಲು ಮಾನ್ಯ ಮುಖ್ಯಮಂತ್ರಿಯವರಿಗೆ ಅಧಿಕಾರ ನೀಡಿರುತ್ತದೆ. ಉಳಿದಂತೆ, ಸಚಿವ ಸಂಪುಟ ಉಪ ಸಮಿತಿಯ ವರದಿಯನ್ನು ಸಚಿವ ಸಂಪುಟವು ಸಂಪೂರ್ಣವಾಗಿ ಅಂಗೀಕರಿಸಿರುತ್ತದೆ.

ಸಚಿವ ಸಂಪುಟದ ತೀರ್ಮಾನವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ, ಸಂಬಂಧಪಟ್ಟ ಇಲಾಖೆ / ಪ್ರಾಧಿಕಾರಗಳಾದ ಅರಣ್ಯ ಇಲಾಖೆ, ಒಳಾಡಳಿತ ಇಲಾಖೆ, ಕಾನೂನು ಇಲಾಖೆ, ಸಿ.ಆ.ಸು ಇಲಾಖೆ, ಕರ್ನಾಟಕ ಲೋಕಾಯುಕ್ತ ವ್ಯಾಪ್ತಿಯ ವಿಶೇಷ ತನಿಖಾ ತಂಡ ಮತ್ತು Karnataka State Remote Sensing Application Centre (KSRSAC) ಗಳಿಗೆ ತಿಳಿಸಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮತ್ತು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗಳಿಂದ ಕ್ರಮ ವಹಿಸುವ ಅಗತ್ಯವಿರುತ್ತದೆ. ಅದರಂತೆ, ಪರಿಶೀಲಿಸಿದ ಸರ್ಕಾರವು ಈ ಕೆಳಗಿನಂತೆ ತೀರ್ಮಾನಿಸಿ ಆದೇಶಿಸಿದೆ:

ಸರ್ಕಾರದ ಆದೇಶ ಸಂಖ್ಯೆ: ಸಿಐ 16 ಎಂಐಸಿ 2025, ಬೆಂಗಳೂರು, ದಿನಾಂಕ: 08.09.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಚಿವ ಸಂಪುಟವು ದಿನಾಂಕ:19.08.2025 ರಂದು ತೀರ್ಮಾನಿಸಿರುವಂತೆ ಈ ಕೆಳಕಂಡ ಶಿಫಾರಸ್ಸುಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸಲು ಈ ಕೆಳಗಿನಂತೆ ಕ್ರಮ ವಹಿಸಲು ಸಂಬಂಧಪಟ್ಟ ಇಲಾಖೆ / ಪ್ರಾಧಿಕಾರಗಳಿಗೆ ಆದೇಶಿಸಿದೆ.

(i) ವಿಶೇಷ ತನಿಖಾ ತಂಡವು ಮಾನ್ಯ ನ್ಯಾಯಾಲಯಕ್ಕೆ 29 ಪ್ರಕರಣಗಳಲ್ಲಿ 'ಬಿ' ರಿಪೋರ್ಟ್ ಸಲ್ಲಿಸಿದ್ದು, 'ಬಿ' ರಿಪೋರ್ಟ್‌ನಲ್ಲಿ ದಾಖಲಿಸಿದ ಕಾರಣಗಳನ್ನು ಅವಲೋಕಿಸಲಾಗಿ ಕೆಲವು ಪ್ರಕರಣಗಳಲ್ಲಿ ನೀಡಲಾದ ಕಾರಣಗಳು ಮೇಲ್ನೋಟಕ್ಕೆ ಸಮಂಜಸವಾಗದಿರುವುದನ್ನು ಉಪ ಸಮಿತಿಯು ಗಮನಿಸಿತು. ಆದ್ದರಿಂದ, ಮತ್ತೊಮ್ಮೆ 29 ಪ್ರಕರಣಗಳಲ್ಲಿನ 'ಬಿ' ರಿಪೋರ್ಟ್ ಅನ್ನು ಮರುಪರಿಶೀಲಿಸಲು ವಿಶೇಷ ತನಿಖಾ ತಂಡವು ಕ್ರಮ ವಹಿಸುವುದು.

(ii) ಈ ಬಗ್ಗೆ ಕ್ರಮ ಕೈಗೊಳ್ಳುವವರೆಗೆ ವಿಶೇಷ ತನಿಖಾ ತಂಡ ಮಾನ್ಯ ನ್ಯಾಯಾಲಯದಲ್ಲಿ 'ಬಿ' ರಿಪೋರ್ಟ್‌ಗಳನ್ನು ಸಲ್ಲಿಸಿರುವ 8 ಪ್ರಕರಣಗಳ 'ಬಿ' ರಿಪೋರ್ಟನ್ನು ಪರಿಗಣಿಸದಂತೆ ನ್ಯಾಯಾಲಯಕ್ಕೆ ಕೋರಲು ವಿಶೇಷ ತನಿಖಾ ತಂಡವು ಕ್ರಮ ವಹಿಸುವುದು.

(iii) ಪರಿಸರ ಮತ್ತು ಅರಣ್ಯ ಇಲಾಖೆಗೆ ಆದ ನಷ್ಟವನ್ನು ಅಂದಾಜಿಸಲು, ಅರಣ್ಯ ಇಲಾಖೆಯಲ್ಲಿ ಪ್ರಕರಣವಾರು ತನಿಖಾ ತಂಡವನ್ನು ರಚಿಸಿ, ವಿವರಗಳನ್ನು ಮುಂದಿನ ಕ್ರಮಕ್ಕಾಗಿ ವಿಶೇಷ ತನಿಖಾ ತಂಡಕ್ಕೆ ಸಲ್ಲಿಸಲು ಅರಣ್ಯ ಇಲಾಖೆಯು ಕ್ರಮ ವಹಿಸುವುದು. ಅದರಂತೆ, ವಿಶೇಷ ತನಿಖಾ ತಂಡವು ವಿವರಗಳನ್ನು ಅರಣ್ಯ ಇಲಾಖೆಯಿಂದ ಪಡೆದು ಕ್ರಮ ವಹಿಸುವುದು.

(iv) 10 ವರ್ಷಗಳ ನಂತರ ಸಿಬಿಐ ತಂಡ ತನಿಖೆ ನಡೆಸದೇ ಇರುವಂತಹ ಈ ಗಂಭೀರ ಲೋಪವನ್ನು ತಿಳಿಸಿ ತಕ್ಷಣ ತನಿಖೆ ಪೂರ್ಣಗೊಳಿಸಿ ಕ್ರಮ ತೆಗೆದುಕೊಳ್ಳಲು ಅಥವಾ ವಿಶೇಷ ತನಿಖಾ ತಂಡದ ಮೂಲಕ ತನಿಖೆಗೆ ಒಳಪಡಿಸಲು ಸಿಬಿಐ ಗೆ ವಹಿಸಿದ ಪ್ರಕರಣಗಳನ್ನು ವಾಪಸ್ಸು ನೀಡುವಂತೆ ಒಳಾಡಳಿತ ಇಲಾಖೆಯು ಕೇಂದ್ರ ಸರ್ಕಾರವನ್ನು ಕೋರಲು ಕ್ರಮ ವಹಿಸುವುದು.

(v) ಉಪಖನಿಜ ಮತ್ತು ಮುಖ್ಯಖನಿಜಗಳ ಅನಧಿಕೃತ ಗಣಿಗಾರಿಕೆ, ಸಾಗಾಣಿಕೆ ಸಂಬಂಧಿಸಿದಂತೆ ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ದಾಖಲಿಸಲಾದ ಎಫ್.ಐ.ಆರ್ ಗಳಲ್ಲಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿ, ತ್ವರಿತವಾಗಿ ಪ್ರಕರಣಗಳನ್ನು ಹಿಂಬಾಲಿಸಿ ಇತ್ಯರ್ಥ ಪಡಿಸಲು ಕ್ರಮ ವಹಿಸುವಂತೆ ಪೊಲೀಸ್ ಇಲಾಖೆಗೆ ನಿರ್ದೇಶನ ನೀಡಲು ಒಳಾಳಿತ ಇಲಾಖೆಯು ಕ್ರಮ ವಹಿಸುವುದು.

(vi) KSRSAC ಸಂಸ್ಥೆಯು 2014 ರಿಂದ ಹೊರತೆಗೆದಿರುವ ಕಬ್ಬಿಣದ ಅದಿರಿನ ಪ್ರಮಾಣವನ್ನು ಅಂದಾಜಿಸಲು ಸಾಕಷ್ಟು ಕಾಲಾವಕಾಶ ತೆಗೆದುಕೊಂಡಿದ್ದು, ತನಿಖೆಯ ಮೇಲೆ ಸಾಕಷ್ಟು ಪರಿಣಾಮ ಬೀರಿದೆ. ಈ ಅವಧಿಯಲ್ಲಿ ಕಾರ್ಯ ನಿರ್ವಹಿಸಿದ KSRSAC ಜವಾಬ್ದಾರಿಯುತ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿ ಸಿ ವರ್ಗದ ಗಣಿಗುತ್ತಿಗೆಗಳಿಗೆ ಸಂಬಂದಿಸಿದ ವರದಿಗಳನ್ನು ಮೂರು ತಿಂಗಳೊಳಗಾಗಿ ಅಂತಿಮಗೊಳಿಸಲು Karnataka State Remote Sensing Application Centre (KSRSAC) ಗೆ ಸೂಕ್ತ ನಿರ್ದೇಶನ ನೀಡಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಯು ಕ್ರಮ ವಹಿಸುವುದು.

(vii) 'ಬಿ' ವರ್ಗದ ಗಣಿಗುತ್ತಿಗೆಗಳಿಂದ ಹೊರತೆಗೆದ ಕಬ್ಬಿಣದ ಅದಿರಿನ ಪ್ರಮಾಣವನ್ನು ಅಂದಾಜಿಸುವ ಕುರಿತು ಸಿಇಸಿ ಯು 2019 ರಲ್ಲಿ ಮಾನದಂಡಗಳನ್ನು ಅನುಮೋದನೆಗಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುತ್ತದೆ. 2019 ರಿಂದ ಇಲ್ಲಿಯವರೆವಿಗೂ ವಿಷಯವು ಇತ್ಯರ್ಥಕ್ಕೆ ಬಾಕಿ ಇದ್ದು, ಸದರಿ ಮಾನದಂಡಗಳ ಅನುಮೋದನೆ ಪಡೆಯಲು ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಸಂಬಂಧಪಟ್ಟ ಪ್ರಾಧಿಕಾರದೊಂದಿಗೆ ಸೂಕ್ತ ಸಮನ್ವಯ ಸಾಧಿಸುವುದು.

(viii) ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ಕುರಿತು SIT ತಂಡ ಅಥವಾ ಇನ್ನಿತರ ತನಿಖಾ ಸಂಸ್ಥೆಗಳಿಂದ ದಾಖಲಿಸುವ ಪ್ರಕರಣಗಳ ವಿಚಾರಣೆಗೆ ತ್ವರಿತ ನ್ಯಾಯಾಲಯಗಳನ್ನು (Fast Track court) ಸ್ಥಾಪಿಸಲು ಕಾನೂನು ಇಲಾಖೆ ಅಗತ್ಯ ಕ್ರಮ ವಹಿಸುವುದು.

(ix) ಮಾನ್ಯ ನ್ಯಾಯಾಲಯಗಳಲ್ಲಿ (ಬೆಂಗಳೂರು ಹಾಗೂ ನವದೆಹಲಿ) ದಾಖಲಾಗುವ ಪ್ರಕರಣಗಳನ್ನು ಸಮರ್ಪಕವಾಗಿ ನಿರ್ವಹಿಸಲು ಗಣಿ ಪ್ರಕರಣಗಳಲ್ಲಿ ಪರಿಣಿತಿ ಹೊಂದಿರುವ ಕಾನೂನು ಅಧಿಕಾರಿಗಳ ತಂಡವನ್ನು ರೂಪಿಸಲು ಒಳಾಡಳಿತ ಇಲಾಖೆಯು ವಿಶೇಷ ತನಿಖಾ ತಂಡದೊಂದಿಗೆ ಸಮನ್ವಯ ಸಾಧಿಸಿ, ಅಗತ್ಯ ಕ್ರಮ ವಹಿಸುವುದು.

(x) ಅಕ್ರಮ ಗಣಿಗಾರಿಕೆಗೆ ಸಹಕರಿಸಿದ ಸರ್ಕಾರಿ ಅಧಿಕಾರಿಗಳು / ಸಿಬ್ಬಂದಿ ವರ್ಗ ಮತ್ತು ಮಧ್ಯವರ್ತಿಗಳು / ಖಾಸಗಿ ವ್ಯಕ್ತಿಗಳ ವಿರುದ್ಧ ಲೋಕಾಯುಕ್ತ ಶಿಫಾರಸ್ಸಿನಂತೆ ಸೂಕ್ತ ಕ್ರಮ ಕೈಗೊಳ್ಳಲು ವಿಶೇಷ ತನಿಖಾ ತಂಡವು ಅಗತ್ಯ ಕ್ರಮ ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಉಮ್ಮೇ ಕೌಸರ್)
ಉಪ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
(ವಿಶೇಷ ತನಿಖಾ ಮತ್ತು ಸಮನ್ವಯ ಕೋಶ)

PR-230

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ದಿ ಮೈಸೂರು ಸಿಟಿ ಲೋಕಲ್ ಲಾರಿ ಓನರ್ಸ್ ಅಸೋಸಿಯೇಷನ್, ಮೈಸೂರು ಈ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ :-
1. ಸರ್ಕಾರದ ಆದೇಶ ಸಂ. ಸಿಬ 67 ಸಿಎಸ್ಆರ್ 2024, ದಿನಾಂಕ:18.07.2024.
2. ಸಹಕಾರ ಸಂಘಗಳ ಉಪ ನಿಬಂಧಕರು, ಮೈಸೂರು ಜಿಲ್ಲೆ ಇವರ ಪತ್ರ ಸಂಖ್ಯೆ. ಡಿಆರ್ಎಂ:ಸಿ-12:ಸಂ.ಸಂ:ಆಡಳಿತಾಧಿಕಾರಿ:05::2023-24, ದಿನಾಂಕ:05.08.2025.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಆದೇಶದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ದಿ ಮೈಸೂರು ಸಿಟಿ ಲೋಕಲ್ ಲಾರಿ ಓನರ್ಸ್ ಅಸೋಸಿಯೇಷನ್, ಹರಿಶ್ಚಂದ್ರ ರಸ್ತೆ, ರೇಸ್ ಕೋರ್ಸ್ ಪಕ್ಕ, ಲಾರಿ ತಂಗುದಾಣ, ಮೈಸೂರು ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (2)ರ ಪತ್ರದಲ್ಲಿ ಉಪ ನಿಬಂಧಕರು, ಮೈಸೂರು ಜಿಲ್ಲೆ, ರವರು ಈ ಸಂಘದ ಆಡಳಿತಾಧಿಕಾರಿಯು ಸಂಘದ ಆಡಳಿತ ಮಂಡಳಿಯನ್ನು ರಚಿಸಲು ಅರ್ಹ ಮತ್ತು ಅನರ್ಹ ಮತದಾರರ ಪಟ್ಟಿಯನ್ನು ತಯಾರಿಸಿದ್ದು, ಬಾಕಿದಾರರಿಗೆ ತಮ್ಮ ಬಾಕಿಯನ್ನು ತೀರುವಳಿ ಮಾಡಲು ಕಾಲಾವಕಾಶ ನೀಡಬೇಕಿದ್ದು, ಸಂಘದ ಲೆಕ್ಕ ಪತ್ರಗಳನ್ನು ಲೆಕ್ಕಪರಿಶೋಧನೆಗೆ ಒಳಪಡಿಸಿ, ವಾರ್ಷಿಕ ಮಾಹಾಸಭೆಯಲ್ಲಿ ಮಂಡಿಸಲು ಕಾಲಾವಕಾಶದ ಅವಶ್ಯಕತೆ ಇರುವುದರಿಂದ ಸಂಘದ ಆಡಳಿತಾಧಿಕಾರಿಯ ಕೋರಿಕೆಯನ್ನು ಪರಿಗಣಿಸಿ, ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಸಂಘದ ಆಡಳಿತಾಧಿಕಾರಿ ಅವಧಿಯು ದಿನಾಂಕ:17.01.2025ಕ್ಕೆ ಮುಕ್ತಾಯಗೊಂಡಿರುವುದರಿಂದ, ಉಪ ನಿಬಂಧಕರ ಶಿಫಾರಸ್ಸಿನಂತೆ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:18.01.2025 ರಿಂದ ದಿನಾಂಕ:17.07.2025 ರವರೆಗೆ ಮತ್ತು ದಿನಾಂಕ:18.07.2025ರಿಂದ ಮುಂದಿನ 6 ತಿಂಗಳ ಅವಧಿಗೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿದೆ, ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಬ 67 ಸಿಎಸ್ಆರ್ 2024

ಬೆಂಗಳೂರು, ದಿನಾಂಕ: 18.09.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ರಾಯಚೂರು ದಿ ಮೈಸೂರು ಸಿಟಿ ಲೋಕಲ್ ಲಾರಿ ಓನರ್ಸ್ ಅಸೋಸಿಯೇಷನ್, ಹರಿಶ್ಚಂದ್ರ ರಸ್ತೆ, ರೇಸ್ ಕೋರ್ಸ್ ಪಕ್ಕ, ಮೈಸೂರು, ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:18.01.2025 ರಿಂದ ದಿನಾಂಕ:17.07.2025 ರವರೆಗೆ ಮತ್ತು ದಿನಾಂಕ:18.07.2025ರಿಂದ ಮುಂದಿನ 6 ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಸಂಘದ ನ್ಯೂನತೆಗಳನ್ನು ಸರಿಪಡಿಸಿ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-231

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ವಿಶ್ವಕರ್ಮ ಸಮಾಜ, ಕಲಬುರಗಿ, ಈ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ:-
1. ಸರ್ಕಾರದ ಆದೇಶ ಸಂಖ್ಯೆ: ಸಿಓ 80 ಸಿಎಸ್‌ಆರ್ 2021, ಬೆಂಗಳೂರು, ದಿನಾಂಕ: 05.01.2023 ಮತ್ತು 27.07.2023.
2. ಸಹಕಾರ ಸಂಘಗಳ ಉಪ ನಿಬಂಧಕರು, ಕಲಬುರಗಿ ಜಿಲ್ಲೆ ಇವರ ಪತ್ರ ಸಂಖ್ಯೆ; ಉನಿಕ/ವಿ10/ಸಂ.ಸಂ/2025-226/1039, ದಿನಾಂಕ:09.09.2025.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಆದೇಶದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ **ವಿಶ್ವಕರ್ಮ ಸಮಾಜ**, ಕಾಳಿಕದೇವಿ ಮಂದಿರ, ಸಂತ್ರಾಸವಾಡಿ, **ಕಲಬುರಗಿ**, ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ ಆದೇಶಿಸಲಾಗಿತ್ತು. ನಂತರ ಆಡಳಿತಾಧಿಕಾರಿಯ ಅವಧಿಯನ್ನು 06 ತಿಂಗಳ ಅವಧಿಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ (2)ರ ಪತ್ರದಲ್ಲಿ, ಸಂಘದ ಆಡಳಿತ ಮಂಡಳಿಗೆ ಚುನಾವಣೆಯನ್ನು ನಡೆಸಲು ರಿಟರ್ನಿಂಗ್ ಅಧಿಕಾರಿಯನ್ನು ನೇಮಿಸಿ, ನಿಯಮಾನುಸಾರ ಚುನಾವಣೆ ನಡೆಸಿ, ಪ್ರಭಾರವನ್ನು ಹಸ್ತಾಂತರಿಸಲು ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಸಂಘದ ಆಡಳಿತಾಧಿಕಾರಿ ಅವಧಿಯು ದಿನಾಂಕ: 05.01.2024ಕ್ಕೆ ಮುಕ್ತಾಯಗೊಳ್ಳುವುದರಿಂದ ಸಹಕಾರ ಸಂಘಗಳ ಉಪ ನಿಬಂಧಕರು, ಕಲಬುರಗಿ ಜಿಲ್ಲೆ ಇವರ ಪ್ರಸ್ತಾವನೆಯಂತೆ ಅವಧಿಯನ್ನು ದಿನಾಂಕ: 06.01.2024 ರಿಂದ ದಿನಾಂಕ: 05.07.2024 ರವರೆಗೆ, ದಿನಾಂಕ: 06.07.2024 ರಿಂದ ದಿನಾಂಕ: 05.01.2025 ರವರೆಗೆ, ದಿನಾಂಕ: 06.01.2025 ರಿಂದ 05.07.2025 ರವರೆಗೆ ಹಾಗೂ ದಿನಾಂಕ: 06.07.2025 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿದೆ, ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಓ 80 ಸಿಎಸ್ಆರ್ 2021

ಬೆಂಗಳೂರು, ದಿನಾಂಕ: 25.09.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ವಿಶ್ವಕರ್ಮ ಸಮಾಜ, ಕಾಳಿಕದೇವಿ ಮಂದಿರ, ಸಂತ್ರಾಸವಾಡಿ, ಕಲಬುರಗಿ, ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ: 06.01.2024 ರಿಂದ ದಿನಾಂಕ:05.07.2024 ರವರೆಗೆ, ದಿನಾಂಕ:06.07.2024 ರಿಂದ ದಿನಾಂಕ:05.01.2025 ರವರೆಗೆ, ದಿನಾಂಕ:06.01.2025 ರಿಂದ 05.07.2025 ರವರೆಗೆ ಹಾಗೂ ದಿನಾಂಕ:06.07.2025 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಸಂಘದಲ್ಲಿನ ನ್ಯೂನತೆಗಳನ್ನು ನಿಯಮಾನುಸಾರ ಸರಿಪಡಿಸಲು ಕ್ರಮವಿಟ್ಟು, ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-232

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಈ ಸಂಘದ ಆಡಳಿತಾಧಿಕಾರಿಯನ್ನು ಬದಲಾಯಿಸಿ, ಆಡಳಿತಾಧಿಕಾರಿ ಅವಧಿಯನ್ನು ವಿಸ್ತರಿಸುವ ಬಗ್ಗೆ..

ಓದಲಾಗಿದೆ:-
1. ಸರ್ಕಾರದ ಆದೇಶ ಸಂಖ್ಯೆ: ಸಇ 26 ಸಸಂನೋ 2016, ಬೆಂಗಳೂರು, ದಿನಾಂಕ: 04.05.2020, 06.02.2021, 16.07.2021, 09.02.2022, 18.07.2022, 19.01.2023, 14.06.2023, 16.08.2023, 29.01.2024 ಮತ್ತು 29.04.2024.
2. ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರ ಪತ್ರ ಆರ್‌ಸಿಎಸ್/ಸಂಘ ಸಂಸ್ಥೆ-02/185/2024-25, ದಿನಾಂಕ:30.06.2025.
3. ಸಹಕಾರ ಸಂಘಗಳ ಉಪ ನಿಬಂಧಕರು, 4ನೇ ವಲಯ ಇವರ ಪತ್ರ ಸಂಖ್ಯೆ:ಡಿಆರ್‌ಬಿ-4/ಎಸ್‌ಒಆರ್/ಅ.ಅ./01/2023-24 ದಿನಾಂಕ:13.09.2024 ಮತ್ತು ಡಿಆರ್‌ಬಿ-4/ಎಸ್‌ಒಆರ್/ಅ.ಅ./196/2024-25 ದಿನಾಂಕ:18.02.2025

****

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್, ಬೆಂಗಳೂರು, ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ ಆದೇಶಿಸಲಾಗಿತ್ತು. ನಂತರ ಕಾಲಕಾಲಕ್ಕೆ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸಲಾಗಿತ್ತು. ಸರ್ಕಾರದ ದಿನಾಂಕ:

29.04.2024ರ ಆದೇಶದಲ್ಲಿ ಆಡಳಿತಾಧಿಕಾರಿಯನ್ನು ಬದಲಾಯಿಸಿ, ಶ್ರೀ.ಕಿಶೋರ್ ಜೋಶಿ, ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಇವರನ್ನು ಆಡಳಿತಾಧಿಕಾರಿಯಾಗಿ ನೇಮಿಸಲಾಗಿತ್ತು.

ಮೇಲೆ ಓದಲಾದ (2) ರ ಪತ್ರದಲ್ಲಿ ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, 4ನೇ ವಲಯ, ಬೆಂಗಳೂರು ಮತ್ತು ಆಡಳಿತಾಧಿಕಾರಿ, ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್, ಇವರ ವರದಿಯಂತೆ ಶ್ರೀ ಕಿಶೋರ್‌ಕುಮಾರ್ ಜೋಷಿ, ಸಹಕಾರ ಸಂಘಗಳ ಉಪ ನಿಬಂಧಕರು, ಇವರ ಕೇಂದ್ರಸ್ಥಾನ ಬದಲಾವಣೆಯಾಗಿರುವುದರಿಂದ ಸಂಘದ ಆಡಳಿತಾಧಿಕಾರಿಯನ್ನು ಬದಲಾಯಿಸಿ ಬೇರೊಬ್ಬ ಆಡಳಿತಾಧಿಕಾರಿಯನ್ನು ನೇಮಕ ಮಾಡಿದಲ್ಲಿ ನಿವೇಶನ ದೊರಕದೇ ವಂಚಿತರಾಗಿರುವ ಅರ್ಹ ಸದಸ್ಯರಿಗೆ ಪರಿಣಾಮಕಾರಿಯಾಗಿ ನ್ಯಾಯ ಒದಗಿಸಬಹುದಾಗಿರುತ್ತದೆ ಎಂಬ ಅಭಿಪ್ರಾಯಪಟ್ಟು ನಿಬಂಧಕರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (3) ರ ದಿನಾಂಕ:13.09.2024 ಪತ್ರದಲ್ಲಿ ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಈ ಸಂಘಕ್ಕೆ ಆಡಳಿತಾಧಿಕಾರಿಯಾಗಿ ಶ್ರೀ. ಕಿಶೋರ್ ಕುಮಾರ್ ಜೋಷಿ, ಸಹಕಾರ ಸಂಘಗಳ ಉಪ ನಿಬಂಧಕರು, ವರ್ಗಾವಣೆಗೊಂಡಿರುವುದರಿಂದ ಸಂಘಕ್ಕೆ ಆಡಳಿತಾಧಿಕಾರಿಯಾಗಿ ಬೇರೊಬ್ಬ ಅಧಿಕಾರಿಯನ್ನು ನೇಮಿಸಲು ಕೋರಿರುತ್ತಾರೆ. ಹಾಗೂ ದಿನಾಂಕ: 18.02.2025ರ ಪತ್ರದಲ್ಲಿ ಪ್ರಸ್ತುತ ಇರುವ ಸಂಘದ ಆಡಳಿತಾಧಿಕಾರಿಯವರ ಕೇಂದ್ರ ಸ್ಥಾನ ಬದಲಾವಣೆಯಾಗಿರುವುದರಿಂದ ಆಡಳಿತಾಧಿಕಾರಿಯನ್ನು ಬದಲಾಯಿಸಿ ಬೇರೊಬ್ಬ ಅಧಿಕಾರಿಯನ್ನು ನೇಮಿಸಿ, ನಿವೇಶನ ದೊರಕದೇ ವಂಚಿತರಾಗಿರುವ ಅರ್ಹ ಸದಸ್ಯರಿಗೆ ಪರಿಣಾಮಕಾರಿಯಾಗಿ ನ್ಯಾಯ ಒದಗಿಸಬಹುದಾಗಿರುತ್ತದೆ ಎಂಬ ಅಭಿಪ್ರಾಯದೊಂದಿಗೆ ಈ ವರದಿಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವೆಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಸಹಕಾರ ಸಂಘಗಳ ನಿಬಂದಕರು, ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಆಡಳಿತಾಧಿಕಾರಿ, ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್, ಇವರ ವರದಿಯಂತೆ ಸಂಘದ ವತಿಯಿಂದ ನಿವೇಶನ ಹಂಚಿಕೆಯಾಗದೆ ವಂಚಿತರಾಗಿರುವ ಅರ್ಹ ಸದಸ್ಯರಿಗೆ ಪರಿಣಾಮಕಾರಿಯಾಗಿ ನ್ಯಾಯ ಒದಗಿಸುವ ದೃಷ್ಠಿಯಿಂದ ಹಾಗೂ ಸಾರ್ವಜನಿಕ ಮತ್ತು ಸಂಘದ ಸದಸ್ಯರ ಹಿತಾದೃಷ್ಟಿಯಿಂದ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ.27(ಎ)(5) ರಡಿಯಲ್ಲಿ ಪ್ರಸ್ತುತ ಇರುವ ಆಡಳಿತಾಧಿಕಾರಿ ಶ್ರೀ ಕಿಶೋರ್‌ಕುಮಾರ್ ಜೋಷಿ, ಸಹಕಾರ ಸಂಘಗಳ ಉಪ ನಿಬಂಧಕರು ಇವರನ್ನು ಬದಲಾಯಿಸಿ, ಶ್ರೀ. ಬಾಬುರೆಡ್ಡಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಸಿಬ್ಬಂಧಿ ಶಾಖೆ, ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು ಇವರನ್ನು ಆಡಳಿತಾಧಿಕಾರಿಯಾಗಿ ನೇಮಿಸಲು ಹಾಗೂ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ:04.05.2024 ರಿಂದ 03.11.2024ರವರೆಗೆ, ದಿನಾಂಕ:04.11.2024ರಿಂದ 03.05.2025ರವರೆಗೆ ಹಾಗೂ ದಿನಾಂಕ:04.05.2025ರಂದು ಮುಂದಿನ 06 ತಿಂಗಳ ಅವಧಿಯವರೆಗೆ ಮುಂದುವರೆಸಲು, ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ..

ಸರ್ಕಾರದ ಆದೇಶ ಸಂಖ್ಯೆ: ಸಿಒ 83 ಸಿಎಸ್‌ಆರ್ 2025(ಸಇ 26 ಸಸಂನೋ 2016),
ಬೆಂಗಳೂರು, ದಿನಾಂಕ: 20.09.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ ಕಲಂ.27(ಎ)(5) ರನ್ವಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್, ಬೆಂಗಳೂರು ಈ ಸಂಘದ ಆಡಳಿತಾಧಿಕಾರಿಯಾದ ಶ್ರೀ ಕಿಶೋರ್‌ಕುಮಾರ್ ಜೋಷಿ, ಸಹಕಾರ ಸಂಘಗಳ ಉಪ ನಿಬಂಧಕರು ಇವರನ್ನು ಬದಲಾಯಿಸಿ, **ಶ್ರೀ. ಬಾಬುರೆಡ್ಡಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಸಿಬ್ಬಂಧಿ ಶಾಖೆ, ಸಹಕಾರ ಸಂಘಗಳ ನಿಬಂಧಕರ**

ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು ಇವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿ, ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ: 04.05.2024 ರಿಂದ 03.11.2024ರವರೆಗೆ, ದಿನಾಂಕ: 04.11.2024ರಿಂದ 03.05.2025ರವರೆಗೆ ಹಾಗೂ ದಿನಾಂಕ: 04.05.2025ರಂದು ಮುಂದಿನ 06 ತಿಂಗಳ ಅವಧಿಯವರೆಗೆ ಮುಂದುವರೆಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರವನ್ನು ವಹಿಸಿಕೊಂಡು, ಸಂಘದಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-233

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಭದ್ರಾವತಿ ತಾಲ್ಲೂಕು ಗಂಗಾಮತಸ್ಥರ ಸಂಘ, ಭದ್ರಾವತಿ ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :-
1. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂ.:ಆರ್.ಸಿ.ಎಸ್.::ಐಸಿಡಿಪಿ:ಸಂ.ಸಂ.-04:ಆನೇ:37:2024-25, ದಿನಾಂಕ: 01.07.2024.
2. ಸರ್ಕಾರದ ನೋಟೀಸ್ ಸಂ:ಸಿಒ 86 ಸಿ.ಎಸ್.ಆರ್ 2024, ದಿನಾಂಕ: 18.07.2024.
3. ಶ್ರೀ. ಹೆಚ್.ಎ. ಪರಮೇಶ್ವರಪ್ಪ, ಅಧ್ಯಕ್ಷರು, ಭದ್ರಾವತಿ ತಾಲ್ಲೂಕು ಗಂಗಾಮತಸ್ಥರ ಸಂಘ, ಭದ್ರಾವತಿ ಇವರ ಲಿಖಿತ ಹೇಳಿಕೆ ದಿನಾಂಕ:23.07.2024.
4. ಪ್ರಧಾನ ಕಾರ್ಯದರ್ಶಿ, ಭದ್ರಾವತಿ ತಾಲ್ಲೂಕು ಗಂಗಾಮತಸ್ಥರ ಸಂಘ, ಭದ್ರಾವತಿ ಇವರ ಲಿಖಿತ ಹೇಳಿಕೆ ದಿನಾಂಕ:08.08.2024.
5. ಸಹಕಾರ ಸಂಘಗಳ ಉಪ ನಿಬಂಧಕರು, ಶಿವಮೊಗ್ಗ ಜಿಲ್ಲೆ ಇವರ ಪತ್ರ ಸಂಖ್ಯೆ:ಡಿಆರ್ಎಸ್/ಎಸ್ಒಆರ್/ದೂಅ/ಸಿಆರ್-51/2023-24/743, ದಿನಾಂಕ:25.09.2024.
6. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂ.:ಆರ್.ಸಿ.ಎಸ್.::ಐಸಿಡಿಪಿ:ಸಂ.ಸಂ.-04:ಆನೇ:37:2024-25, ದಿನಾಂಕ: 26.12.2024.

*****

ಪ್ರಸ್ತಾವನೆ:

ಭದ್ರಾವತಿ ತಾಲ್ಲೂಕು ಗಂಗಾ ಮತಸ್ಥರ ಸಂಘ,(ನೋಂದಣಿ ಸಂಖ್ಯೆ:157/2001-02), ಸಿ.ಎನ್ ರಸ್ತೆ, ಭದ್ರಾವತಿ ಈ ಸಂಘದ ವಿರುದ್ಧದ ದೂರು ಅರ್ಜಿಯನ್ನು ಪರಿಶೀಲಿಸಿ ಸಲ್ಲಿಸಿರುವ ಮೇಲೆ ಓದಲಾದ (1) ರ ವರದಿಯಲ್ಲಿ, ಸಂಘವು ನೋಂದಣಿಯಾದಾಗಿನಿಂದ ಆಡಳಿತ ಮಂಡಳಿ ಸದಸ್ಯರ ಆಯ್ಕೆ ಆಗಿರುವುದಿಲ್ಲವೆಂದು, ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯಾಗಿ ಅದೇ ವ್ಯಕ್ತಿಗಳು ಮುಂದುವರೆದಿದ್ದು, 2021-22ನೇ ಮತ್ತು 2022-23ನೇ ಸಾಲಿನ ಆಡಿಟ್ ತಃಖ್ತೆ ಪ್ರಕಾರ ಹಣ ಪಾವತಿ ಮಾಡಿರುವ ಕುರಿತು ಸಮಂಜಸ ದಾಖಲಾತಿಗಳನ್ನು ಸಲ್ಲಿಸಲು ಆಡಳಿತ ಮಂಡಳಿಯು ವಿಫಲವಾಗಿದ್ದು, ಸಂಘದ ಕಾರ್ಯದರ್ಶಿಯವರು ಹಣ ದುರುಪಯೋಗ ಮಾಡಿರುವುದು, ಸಂಘದಲ್ಲಿ ಚುನಾವಣೆ ಮುಖಾಂತರ ಆಡಳಿತ ಮಂಡಳಿ ಆಯ್ಕೆ ಮಾಡದೆ ಹಾಲಿ ಆಡಳಿತ ಮಂಡಳಿ ಏಕಪಕ್ಷೀಯವಾಗಿ ಒಂದೇ ಆಡಳಿತ ಮಂಡಳಿ ಮುಂದುವರೆದಿರುವುದರಿಂದ, ನೈಜ ಆಡಳಿತ ಮಂಡಳಿಯನ್ನು ಆಯ್ಕೆ ಮಾಡಲು, ಹಾಲಿ ಆಡಳಿತ ಮಂಡಳಿಯನ್ನು

ರದ್ದುಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸಲು ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರ ಶಿಫಾರಸ್ಸನ್ನು ಪರಿಗಣಿಸಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27 (ಎ) ರೀತ್ಯಾ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಪ್ರಸ್ತಾವನೆಯನ್ನು ನಿಬಂಧಕರು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2)ರಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಕ ಮಾಡಬಾರದೆಂದು ಲಿಖಿತ ಹೇಳಿಕೆ ಸಲ್ಲಿಸಲು ಅಧ್ಯಕ್ಷರು/ಕಾರ್ಯದರ್ಶಿಯವರಿಗೆ ತಿಳಿಸಲಾಗಿತ್ತು.

ಮೇಲೆ ಓದಲಾದ (3)ರ ಲಿಖಿತ ಹೇಳಿಕೆಯಲ್ಲಿ, ಸಂಘವು ನೋಂದಣಿಯಾದಾಗಿನಿಂದ ಆಡಳಿತ ಮಂಡಳಿ ಸದಸ್ಯರ ಆಯ್ಕೆ ಆಗಿರುವುದಿಲ್ಲ, ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯಾಗಿ ಅದೇ ವ್ಯಕ್ತಿಗಳು ಮುಂದುವರೆದಿದ್ದು, 2021-22ನೇ ಸಾಲಿನ ಆಡಿಟ್ ತ:ಖ್ತೆ ಪ್ರಕಾರ ಹಣ ಪಾವತಿ ಮಾಡಿರುವ ಕುರಿತು ಸಮಂಜಸ ದಾಖಲಾತಿಗಳನ್ನು ಸಲ್ಲಿಸಲು ಆಡಳಿತ ಮಂಡಳಿಯು ವಿಫಲವಾಗಿದ್ದು, ಸಂಘದ ಕಾರ್ಯದರ್ಶಿಯವರು ಹಣ ದುರುಪಯೋಗ ಮಾಡಿರುವುದು ಸತ್ಯವಾಗಿದ್ದು, ಹಾಗೂ ಸಂಘದಲ್ಲಿ ಚುನಾವಣೆ ಮುಖಾಂತರ ಆಡಳಿತ ಮಂಡಳಿ ಆಯ್ಕೆ ಮಾಡದೆ ಹಾಲಿ ಆಡಳಿತ ಮಂಡಳಿ ಮುಂದುವರೆದಿರುವುದರಿಂದ ನೈಜ ಆಡಳಿತ ಮಂಡಳಿಯನ್ನು ಆಯ್ಕೆ ಮಾಡಲು, ಹಾಲಿ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸುವುದು ಅನಿವಾರ್ಯವಾಗಿದ್ದು, ಈ ಸಂಬಂಧ ಯಾವುದೇ ತಕರಾರು ಅಭ್ಯಂತರ ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮೇಲೆ ಓದಲಾದ (4)ರ ಲಿಖಿತ ಹೇಳಿಕೆಯಲ್ಲಿ, ಸಂಘವು ನೋಂದಣಿ ಆದಾಗಿನಿಂದ ಪ್ರತಿ ವರ್ಷ ಸರ್ವ ಸದಸ್ಯರ ಸಭೆಯನ್ನು ಕರೆಯಲಾಗಿ ಸರ್ವ ಸದಸ್ಯರ ಸಭೆಯಲ್ಲಿ ಆಯಾ ವರ್ಷದ ಕಾರ್ಯಕಾರಿ ಸಮಿತಿ ಸದಸ್ಯರನ್ನು ಅವಿರೋಧವಾಗಿ ಆಯ್ಕೆ ಮಾಡಿ, 2022-23ನೇ ಸಾಲಿನವರೆಗೆ ಕಾರ್ಯಕಾರಿ ಸಮಿತಿಯ ಪಟ್ಟಿಯೊಂದಿಗೆ ಆಯಾ ವರ್ಷದ ಆಡಿಟ್ ಆದ ಲೆಕ್ಕಪತ್ರಗಳ ತಖ್ತೆಗಳನ್ನು ಸಂಘದ ನೋಂದಣಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ, ಇವರಿಗೆ ನೋಂದಾಯಿಸಿ ಸಾಲಿನವರೆಗೆ ನವೀಕರಿಸಿಕೊಳ್ಳಲಾಗಿದೆಯೆಂದು, ಇಲ್ಲಿಯವರೆಗೂ ಪದಾಧಿಕಾರಿಗಳಿಂದ ಯಾವುದೇ ಹಣ ದುರುಪಯೋಗ ಆಗಿಲ್ಲವೆಂದು, ಸಂಘದ 2021-22 ನೇ ಸಾಲಿನಲ್ಲಿ ಲೆಕ್ಕಪರಿಶೋಧನಾ ತಖ್ತೆಯಲ್ಲಿ, ಖರ್ಚಿನ ಭಾಗದಲ್ಲಿ ರೂ.1,06,864/- ಗಳನ್ನು ಕಮಿಷನ್ ಬಿಲ್ಲಿಗಾಗಿ ಕೊಟ್ಟಿದ್ದು ಎಂದು ನಮೂದಿಸಿರುವುದು ಸತ್ಯವಿರುತ್ತದೆ. ಈ ಮೊಬಲಗನ್ನು ಸಂಘದ ಅಧ್ಯಕ್ಷರ ಮೌಖಿಕ ಆದೇಶದ ಮೇರೆಗೆ ಸಂಘದ ಕಟ್ಟಡ ನಿರ್ಮಾಣದ ವೇಳೆ ಬರಬಹುದಾದ ಅನಿರೀಕ್ಷಿತ ವೆಚ್ಚಗಳನ್ನು ಭರಿಸಲು ಸಂಘದಿಂದ ಖರ್ಚುಹಾಕಿ ಪಾವತಿಸಲಾಗಿದೆ. ಈ ಖರ್ಚುಗಳನ್ನು ವಾಸ್ತವವಾಗಿ ನೀಡಿರುತ್ತೇವೆ. ಆದರೆ ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ. ನಂತರ, 2022-23 ನೇ ಸಾಲಿನಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿ ಖರ್ಚು ಬಾಬ್ತು ಮತ್ತು ಅಂಬಿಗರ ಚೌಡಯ್ಯನವರ ಪೀಠಕ್ಕೆ ದೇಣಿಗೆಯು ಒಟ್ಟು ರೂ.44,245/- ವೆಚ್ಚವಾಗಿದ್ದು, ಜಯಂತಿಯನ್ನು ಸರ್ಕಾರದ ಪರವಾಗಿ ಕೈಗೊಂಡಿದ್ದು, ಈ ಬಾಬ್ತು ರೂ.32,703/- ಗಳನ್ನು ರಾಷ್ಟ್ರೀಯ ಹಬ್ಬಗಳ ಆಚರಣೆ ಅಡಿಯಲ್ಲಿ ಸಂಘಕ್ಕೆ ಪಾವತಿಸಲು ಕೋರಿಕೆ ಪತ್ರ ಸಲ್ಲಿಸಿದ್ದು, ಈ ಹಣವು ಸರ್ಕಾರದಿಂದ ಪಾವತಿಯಾದ ನಂತರ ಜಮಾ ಖರ್ಚುಗಳನ್ನು ಮಾಡಿಕೊಳ್ಳಬಹುದಾಗಿದೆ. ಈ ಕುರಿತು ದಿನಾಂಕ:16-01-2023ರಂದು ಕಾರ್ಯಕಾರಿ ಹಾಗೂ ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನಿಸಲಾಗಿದೆ. 2022-23ನೇ ಸಾಲಿನ ಸಂಘದ ವತಿಯಿಂದ, ಗಂಗಾ ಪರಮೇಶ್ವರಿ ಜಯಂತಿಯನ್ನು ಆಚರಿಸಲು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ, ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನ ಕೈಗೊಂಡ ಆಚರಣೆಯಲ್ಲಿ ರೂ.1,56,020/-ಗಳನ್ನು ವೆಚ್ಚ ಮಾಡಲಾಗಿದ್ದು. ಹಾಗೆಯೇ ಅಧ್ಯಕ್ಷರ ಮೌಖಿಕ ಆದೇಶದ ಮೇರೆಗೆ ನಗರ ಸಭಾ ಸಿಬ್ಬಂದಿಯ ಖರ್ಚು ರೂ.20,000/- ಗಳನ್ನು ವೆಚ್ಚ ಮಾಡಿದ್ದು, ಸದರಿ ಖರ್ಚು

ಅನಿರೀಕ್ಷಿತವಾಗಿ ಬರುವ ವೆಚ್ಚವಾಗಿರುತ್ತವೆ. ಈ ಖರ್ಚಿಗೂ ಅಧಿಕೃತ ಪಾವತಿಗಳು ಲಭ್ಯವಿರುವುದಿಲ್ಲವೆಂದು, ಸಂಘದ ಲೆಕ್ಕ ಪತ್ರಗಳು 2022-23 ನೇ ಸಾಲಿನವರೆಗೂ ಆಡಿಟ್ ಆಗಿರುತ್ತದೆ. ಕಾರ್ಯದರ್ಶಿಯಿಂದ ಯಾವುದೇ ಹಣ ದುರುಪಯೋಗವಾಗಿರುವುದಿಲ್ಲ. ಈ ಮೇಲೆ ವಿವರಿಸಿರುವ ಖರ್ಚುಗಳನ್ನು ಅಧ್ಯಕ್ಷರ ಮೌಖಿಕ ಸೂಚನೆ ಮೇರೆಗೆ ಸಂಘದ ಕೆಲಸ ಸುಗಮವಾಗಿ ನಡೆಯಲು ಖರ್ಚು ಹಾಕಿರುತ್ತೆ ವಿನಃ ಯಾವುದೇ ರೀತಿ ಹಣ ದುರುಪಯೋಗ ಕಾರ್ಯದರ್ಶಿಯವರಿಂದ ನಡೆದಿರುವುದಿಲ್ಲ. ಪ್ರತಿ ವರ್ಷ ಸರ್ವ ಸದಸ್ಯರ ಸಭೆ ಸಡೆಸಲಾಗಿದೆ. ಸರ್ವ ಸದಸ್ಯರ ಸಭೆಯಲ್ಲಿ ಆಡಳಿತ ಮಂಡಳಿ ಚುನಾವಣೆಯಿಂದ ಅನಿವಾರ್ಯ ಮತ್ತು ಅನಗತ್ಯವಾಗಿ ಖರ್ಚು ಬರುವುದರಿಂದ ಅವಿರೋಧವಾಗಿ ಸರ್ವಾನುಮತದಿಂದ ಆಯ್ಕೆ ಮಾಡಿದ್ದು, ಏಕಪಕ್ಷೀಯವಾಗಿ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ, ದೂರುದಾರರು ವೈಯಕ್ತಿಕ ದ್ವೇಷದಿಂದ ದೂರು ನೀಡಿದ್ದು, ಸದರಿಯವರು ಆಕ್ಷೇಪಿಸಿರುವ ಅಂಶಗಳನ್ನು ಪರಿಗಣಿಸದೆ, ಆರೋಪಗಳಿಗೆ ಸಮಂಜಸವಾದ ದಾಖಲೆಗಳನ್ನು ಪರಿಗಣಿಸಿ ಹೊಸದಾಗಿ ಸರ್ವ ಸದಸ್ಯರ ಸಭೆ ಮತ್ತು ಕಾರ್ಯಕಾರಿ ಸಮಿತಿ ಚುನಾವಣೆ ನಡೆಸಲು ಅನುಮತಿ ನೀಡಲು ಕೋರಿ, ನೋಟಿಸ್‌ನಲ್ಲಿ ಉದ್ದೇಶಿಸಿರುವ ಆಡಳಿತಾಧಿಕಾರಿಗಳ ನೇಮಕಾತಿ ಕ್ರಮವನ್ನು ಕೈ ಬಿಡಲು ಕೋರಿರುತ್ತಾರೆ.

ಮೇಲೆ ಓದಲಾದ (5) ಮತ್ತು (6)ರ ಪತ್ರಗಳಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಕುರಿತು ಸ್ಪಷ್ಟ ಅಭಿಪ್ರಾಯವನ್ನು ಸಲ್ಲಿಸಿರುತ್ತಾರೆ. ಸದರಿ ಅಭಿಪ್ರಾಯದಲ್ಲಿ ಸಂಘದ ಬೈಲಾ ಸಂಖ್ಯೆ:20ರಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರ ಸಂಖ್ಯೆ ಹಾಗೂ ಪದಾಧಿಕಾರಿಗಳ ಕುರಿತು ಮಾತ್ರ ನಮೂದಾಗಿದ್ದು, ಚುನಾವಣೆಯ ಬಗ್ಗೆ ಪ್ರಸ್ತಾವ ಇರುವುದಿಲ್ಲ. ಸಂಘವು ನೋಂದಣಿಯಾದ ದಿನದಿಂದ ಇಲ್ಲಿಯವರೆಗೂ ಸದರಿ ಆಡಳಿತ ಮಂಡಳಿಯೇ ಮುಂದುವರೆದಿರುತ್ತದೆಂದು, ಬೈಲಾ ಸಂಖ್ಯೆ:10ರಲ್ಲಿ ವಾರ್ಷಿಕ ಸಭೆ, ಬೈಲಾ ಸಂಖ್ಯೆ:11 ರಲ್ಲಿ ವಿಶೇಷ ಸಭೆ ಕರೆಯಲು ಅವಕಾಶವಿರುತ್ತದೆ. 2021-22ನೇ ಸಾಲಿನವರೆಗೆ ಸರ್ವಸದಸ್ಯರ ಸಭೆಯನ್ನು ಕರೆಯಲಾಗಿರುತ್ತದೆ, 2022-23ನೇ ಸಾಲಿನವರೆಗೆ ಲೆಕ್ಕಪತ್ರಗಳನ್ನು ಕಛೇರಿಗೆ ಸಲ್ಲಿಸಿ ಸ್ವೀಕೃತಿ ಪಡೆದಿರುತ್ತಾರೆಂದು, 2021-22ನೇ ಸಾಲಿನ ಅಡಿಟ್‌ನ ಆರ್ಥಿಕ ತ:ಖ್ತೆಗಳನ್ನು ಪರಿಶೀಲಿಸಲಾಗಿ, ರೂ.106864/- ಮತ್ತು ರೂ.29110/- ಪಾವತಿ ಕುರಿತು ದಾಖಲೆ ಇರುವುದಿಲ್ಲವೆಂದು, ಸಂಘದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಗಮನಕ್ಕೆ ತರದೆ ಸಂಘದ ಖಾತೆಯಿಂದ ರೂ.1,48,000/-ಗಳನ್ನು ಡ್ರಾ ಮಾಡಿರುತ್ತಾರೆಂದು ತಿಳಿಸಿ, ಸಂಘದ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಲು ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ 1960ರ ಕಲಂ 27(1)(ಸಿ)ರ ಪ್ರಕಾರ ಆಡಳಿತಾಧಿಕಾರಿಯನ್ನು ನೇಮಕ ಮಾಡಲು ಕೋರಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆ, ಸಂಘದ 02 ಬಣಗಳ ಲಿಖಿತ ಸಮಜಾಯಿಷಿ ಮತ್ತು ನಿಬಂಧಕರ ಹಾಗೂ ಉಪ ನಿಬಂಧಕರ ಸ್ಪಷ್ಟ ಅಭಿಪ್ರಾಯವನ್ನು ಪರಿಶೀಲಿಸಲಾಗಿ, ಸಂಘದಲ್ಲಿ ಹಣ ದುರುಪಯೋಗ ಮಾಡಿರುವುದು ಹಾಗೂ ಆರ್ಥಿಕ ದುರಾಡಳಿತ ಇರುವುದು, ಸಂಘದ ಅಡಿಟ್‌ನ ಆರ್ಥಿಕ ತ:ಖ್ತೆಯಲ್ಲಿನ ಪಾವತಿ ಕುರಿತು ಅಗತ್ಯ ದಾಖಲೆಗಳನ್ನು ಸಂಘದಲ್ಲಿ ನಿರ್ವಹಿಸದಿರುವುದು ಮತ್ತು ಸಂಘದ ಆಡಳಿತ ಮಂಡಳಿ ಆಯ್ಕೆ ಮಾಡದೆ ಹಾಲಿ/ಒಂದೇ ಆಡಳಿತ ಮಂಡಳಿ ಏಕಪಕ್ಷೀಯವಾಗಿ ಮುಂದುವರೆದಿರುವುದು, ಸಂಘದ ಅಧ್ಯಕ್ಷರ ಹೇಳಿಕೆ ಮತ್ತು ಪ್ರಧಾನ ಕಾರ್ಯದರ್ಶಿಯವರ ಹೇಳಿಕೆ ವ್ಯತಿರಿಕ್ತವಾಗಿದ್ದು, ಸಂಘದ ಅಧ್ಯಕ್ಷರ ಹೇಳಿಕೆಯಲ್ಲಿ ಸಂಘದ ಕಾರ್ಯದರ್ಶಿಯವರು ಹಣ ದುರುಪಯೋಗ ಮಾಡಿರುವುದು ಸತ್ಯವಾಗಿದ್ದು, ನೈಜ ಆಡಳಿತ ಮಂಡಳಿಯನ್ನು ಆಯ್ಕೆ ಮಾಡಲು, ಹಾಲಿ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸಲು ತಕರಾರು ಅಭ್ಯಂತರ ಇರುವುದಿಲ್ಲವೆಂದು ತಿಳಿಸಿದ್ದು, ಸಂಘದಲ್ಲಿರುವ ಬಣಗಳ ಗೊಂದಲ ನಿವಾರಿಸಲು ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ, ಅವರ ನೇತೃತ್ವದಲ್ಲಿ ಸಂಘದ ನ್ಯೂನತೆಗಳನ್ನು ಸರಿಪಡಿಸಿ, ಸಂಘದಲ್ಲಿ ಅನುಕೂಲಕರ ಮತ್ತು ಪೂರಕವಾದ ವಾತಾವರಣ ನಿರ್ಮಿಸಿ, ಬೈಲಾ

ರೀತ್ಯ ಸಂಘದ ನೂತನ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಪ್ರಭಾರವನ್ನು ಹಸ್ತಾಂತರಿಸುವುದು ಸೂಕ್ತವೆಂದು ಮನಗಂಡು ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ) ರನ್ವಯ ಆಡಳಿತಾಧಿಕಾರಿಯನ್ನು ನೇಮಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 86 ಸಿಎಸ್ಆರ್ 2024

ಬೆಂಗಳೂರು, ದಿನಾಂಕ: 25.09.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27-ಎ ರನ್ವಯ ಭದ್ರಾವತಿ ತಾಲ್ಲೂಕು ಗಂಗಾ ಮತಸ್ಥರ ಸಂಘ,(ನೋಂದಣಿ ಸಂಖ್ಯೆ:157/2001-02), ಸಿ.ಎನ್ ರಸ್ತೆ, ಭದ್ರಾವತಿ ಈ ಸಂಘಕ್ಕೆ **ಸಹಕಾರ ಅಭಿವೃದ್ಧಿ ಅಧಿಕಾರಿ, ಭದ್ರಾವತಿ** ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರವನ್ನು ವಹಿಸಿಕೊಂಡು, ಸಂಘದಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-234

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಚಿತ್ರದುರ್ಗ ಜಿಲ್ಲಾ ಯಾದವ ಗೊಲ್ಲರ ಸಂಘ(ರಿ), ಚಿತ್ರದುರ್ಗ ಈ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ :- 1) ಸರ್ಕಾರದ ಆದೇಶ ಸಂ. ಸಿಒ 90 ಸಿಎಸ್ಆರ್ 2024, ದಿನಾಂಕ: 27.03.2025.
2) ಸಹಕಾರ ಸಂಘಗಳ ಉಪ ನಿಬಂಧಕರ ಪತ್ರ ಸಂ.:ಡಿಆರ್ಡಿ/ಸಂ-ಸಂ/ಸಿಆರ್-11-1968-69/2025-26, ದಿನಾಂಕ: 17.09.2025.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಆದೇಶದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಚಿತ್ರದುರ್ಗ ಜಿಲ್ಲಾ ಯಾದವ ಗೊಲ್ಲರ ಸಂಘ(ರಿ), ರಂಗಯ್ಯನಬಾಗಿಲು ಬಳಿ, ಚಿತ್ರದುರ್ಗ ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (2) ರ ಪತ್ರದಲ್ಲಿ ಸಂಘದ ಚುನಾವಣೆ ನಡೆಸಲು ತಾತ್ಕಾಲಿಕ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಎಲ್ಲ ಸದಸ್ಯರಿಗೆ ಗುರುತಿನ ಚೀಟಿಯನ್ನು ವಿತರಿಸಿ ಚುನಾವಣೆಯನ್ನು ನಡೆಸಲು ಕಾಲಾವಕಾಶ ಅಗತ್ಯ

ಇರುವುದರಿಂದ ಹಾಗೂ ಆಡಳಿತಾಧಿಕಾರಿಯ ಅವಧಿಯು ದಿನಾಂಕ:27.09.2025ಕ್ಕೆ ಮುಕ್ತಾಯಗೊಳ್ಳಲಿರುವುದರಿಂದ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು 06 ತಿಂಗಳ ಅವಧಿಗೆ ವಿಸ್ತರಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಸಂಘದ ಆಡಳಿತಾಧಿಕಾರಿ ಅವಧಿಯು ದಿನಾಂಕ:26.09.2025ಕ್ಕೆ ಮುಕ್ತಾಯಗೊಳ್ಳಲಿರುವುದರಿಂದ, ಉಪ ನಿಬಂಧಕರ ಶಿಫಾರಸ್ಸಿನಂತೆ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:27.09.2025 ರಿಂದ ಮುಂದಿನ 6 ತಿಂಗಳ ಅವಧಿಗೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿದೆ, ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 90 ಸಿಎಸ್ಆರ್ 2025

ಬೆಂಗಳೂರು, ದಿನಾಂಕ: 18.09.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27-ಎ ರನ್ವಯ ಚಿತ್ರದುರ್ಗ ಜಿಲ್ಲಾ ಯಾದವ ಗೊಲ್ಲರ ಸಂಘ(ರಿ), (ನೋಂದಣಿ ಸಂಖ್ಯೆ:11/1968-69) ರಂಗಯ್ಯನಬಾಗಿಲು ಬಳಿ, ಚಿತ್ರದುರ್ಗ, ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:27.09.2025 ರಿಂದ ಮುಂದಿನ 6 ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-235

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ, ಬೆಂಗಳೂರು ಈ ಸಂಘಕ್ಕೆ ಆಡಳಿತಾಧಿಕಾರಿ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ:- 1. ಸರ್ಕಾರದ ಆದೇಶ ಸಂಖ್ಯೆ: ಸಇ 11 ಸಸಂನೋ 2016 ಬೆಂಗಳೂರು, ದಿನಾಂಕ:07.09.2019, 29.05.2020, 15.09.2020, 26.03.2021, 31.08.2021, 31.12.2021, 15.11.2022, 22.02.2023 ಮತ್ತು 29.11.2023.
2. ಸಹಕಾರ ಸಂಘಗಳ ಸಹಾಯಕ ನಿಬಂಧಕರು, 2ನೇ ವಲಯ, ಇವರ ಪತ್ರ ಸಂಖ್ಯೆ: ಡಿಆರ್ ಬಿ/ಎಸ್ಒಆರ್/01/2018-19, ದಿನಾಂಕ:04.08.2025.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ. (1) ರಲ್ಲಿ ಆದೇಶದಲ್ಲಿ ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ, ಬೆಂಗಳೂರು ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ ಆದೇಶಿಸಲಾಗಿದ್ದು, ನಂತರ ಕಾಲಕಾಲಕ್ಕೆ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರ.ಸಂ. (2) ರಲ್ಲಿ ಸಂಘದ ಸದಸ್ಯತ್ವದ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: WP-1121/2022 ಪ್ರಕರಣವು ಇತ್ಯರ್ಥವಾಗದೇ,ಅಂತಿಮ ಆದೇಶವಾಗದ ಹೊರತು ಸಂಘದ ಚುನಾವಣೆಯನ್ನು ನಡೆಸಲು ಸಾಧ್ಯವಾಗದ ಕಾರಣ ಆಡಳಿತಾಧಿಕಾರಿಯವರ ಕೋರಿಕೆಯನ್ವಯ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ, ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ.27(ಎ)(1)ರನ್ವಯ ದಿನಾಂಕ:06.09.2023ಕ್ಕೆ ಗರಿಷ್ಟ 4 ವರ್ಷ ಪೂರ್ಣಗೊಂಡಿರುತ್ತದೆ. ಆದರೆ ಸಂಘದ ಸದಸ್ಯತ್ವ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ.WP-1121/2022 ಪ್ರಕರಣವು ಇತ್ಯರ್ಥಕ್ಕೆ ಬಾಕಿ ಇರುವುದರಿಂದ ಸಂಘಕ್ಕೆ ಚುನಾವಣೆ ನಡೆದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಆಡಳಿತಾಧಿಕಾರಿಯ ವರದಿ ಮತ್ತು ಉಪ ನಿಬಂಧಕರ ಶಿಫಾರಸ್ಸಿನಂತೆ ಹಾಗೂ ಸಂಘದ ಹಿತದೃಷ್ಟಿಯಿಂದ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಕಲಂ.27(ಎ)(5) ರ ಅವಕಾಶದಂತೆ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ: 07.09.2023 ರಿಂದ 06.03.2024, ದಿನಾಂಕ:07.03.2024ರಿಂದ 06.09.2024ರವರೆಗೆ, ದಿನಾಂಕ:07.09.2024ರಿಂದ 06.03.2025ರವರೆಗೆ, 07.03.2025ರಿಂದ 06.09.2025 ಹಾಗೂ ದಿನಾಂಕ:07.09.2025ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಲು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿದೆ. ಅದರಂತೆ, ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 113 ಸಿಎಸ್‌ಆರ್ 2022(ಸಇ 11 ಸಸಂನೋ 2016),
ಬೆಂಗಳೂರು ದಿನಾಂಕ: 19.09.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27(ಎ) ರನ್ವಯ ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ, ಬೆಂಗಳೂರು - 560 053 ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:07.09.2023 ರಿಂದ 06.03.2024, ದಿನಾಂಕ:07.03.2024ರಿಂದ 06.09.2024ರವರೆಗೆ, ದಿನಾಂಕ:07.09.2024ರಿಂದ 06.03.2025ರವರೆಗೆ, 07.03.2025ರಿಂದ 06.09.2025 ಹಾಗೂ ದಿನಾಂಕ:07.09.2025ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಸದರಿ ಅವಧಿಯಲ್ಲಿ ಸಂಘದಲ್ಲಿನ ನ್ಯೂನತೆಗಳನ್ನು ನಿಯಮಾನುಸಾರ ಸರಿಪಡಿಸಿ, ಸಂಘಕ್ಕೆ ಚುನಾವಣೆ ನಡೆಸಿ, ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ನೀಡಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-236

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :-
1. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂ:ಜಂನಿ/ಐಸಿಡಿಪಿ/ಸಂಸಂ-02/138/2022-23, ದಿನಾಂಕ: 15.09.2025.
2. ಸರ್ಕಾರದ ನೋಟೀಸ್ ಸಂ: ಸಿಒ 281 ಸಿ.ಎಸ್.ಆರ್ 2025, ದಿನಾಂಕ:15.09.2025 ಮತ್ತು ಅಂತಿಮ ನೋಟಿಸ್ ದಿನಾಂಕ:17.09.2025.
3. ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರ 02 ಪತ್ರಗಳ ಸಂಖ್ಯೆ: ಕಸಾಪ/ಮಾನ್ಯ ಅಧ್ಯಕ್ಷರ ಆಪ್ತಶಾಖೆ/2025-26,ದಿನಾಂಕ:20.09.2025 ಮತ್ತು ಸಂಖ್ಯೆ:ಕಸಾಪ/ಮಾನ್ಯ ಅಧ್ಯಕ್ಷರ ಆಪ್ತಶಾಖೆ/2025-26, 22.09.2025.
4. ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ ಹಾಗೂ ವಿಚಾರಣಾಧಿಕಾರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರ ಆದೇಶ ಸಂಖ್ಯೆ: ಸಿಒ 281 ಸಿ.ಎಸ್.ಆರ್ 2025, ದಿನಾಂಕ:22.09.2025.
5. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:29086/2025ರ ಮಧ್ಯಂತರ ಆದೇಶ ದಿನಾಂಕ:23.09.2025.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಪತ್ರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು(ನೋಂದಣಿ ಸಂಖ್ಯೆ:328/1915-16), ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018 ಈ ಸಂಘದ ಕಾರ್ಯಚಟುವಟಿಕೆಗಳ ವಿರುದ್ಧ ಸ್ವೀಕೃತವಾದ ಅನೇಕ ದೂರು ಅರ್ಜಿಗಳಂತೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಪ್ರಕರಣ 25ರಡಿ ವಿಚಾರಣೆ ನಡೆಸಿ ಸಲ್ಲಿಸಿರುವ ಮಧ್ಯಂತರ ವರದಿಯಲ್ಲಿ ಸಂಘದ ವಿರುದ್ಧದ ವಿಚಾರಣಾ ಆದೇಶ ಮತ್ತು ಸಂಘದ ವಾರ್ಷಿಕ ಸಾಮಾನ್ಯ ಸಭೆಯನ್ನು ಮುಂದೂಡಿದ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ.20919/2025 ರಂತೆ ಪ್ರಕರಣವನ್ನು ದಾಖಲಿಸಿದ್ದು, ಸದರಿ ಪ್ರಕರಣದ ಮಧ್ಯಂತರ ಆದೇಶವನ್ನು ಪ್ರಶ್ನಿಸಿ ದಾಖಲಾಗಿದ್ದ ರಿಟ್ ಅಪೀಲು ಸಂಖ್ಯೆ :1460/2025ರ ಪ್ರಕರಣವು ವಜಾಗೊಂಡಿದ್ದು, ಕಾಯ್ದೆಯ ಕಲಂ.25ರ ವಿಚಾರಣೆಯನ್ನು ವಿವಿಧ ದಿನಾಂಕಗಳಂದು ನಡೆಸಲಾಯಿತು. 17 ವಿಚಾರಣಾಂಶಗಳಿಗೆ ಸಂಬಂಧಿಸಿದಂತೆ ಮಾಹಿತಿ ಹಾಗೂ ದಾಖಲೆಗಳನ್ನು ಒದಗಿಸಲು ಪದೇ ಪದೇ ಕಾಲಾವಕಾಶವನ್ನು ಸಂಘವು ಕೋರಿದ್ದು, ಸಾಕಷ್ಟು ಕಾಲಾವಕಾಶವನ್ನು ನೀಡಿದ್ದರೂ 17 ವಿಚಾರಣಾಂಶಗಳ ಮಾಹಿತಿ/ದಾಖಲೆಗಳ ಪೈಕಿ 07 ವಿಚಾರಣಾಂಶಗಳಿಗೆ ಮಾತ್ರ ಭಾಗಶಃ ಮಾಹಿತಿ ಸಲ್ಲಿಸಿದ್ದಾರೆ. ಸಂಘವು ವಿಚಾರಣೆಗೆ ಸರಿಯಾಗಿ ಸ್ಪಂದಿಸದೆ, ಕಾಲಾವಕಾಶ ಕೋರುತ್ತಾ, ಕಾರಣಗಳನ್ನು ಹೇಳುತ್ತಾ ಸಮಯವನ್ನು ಮುಂದೂಡುತ್ತಿದ್ದಾರೆ. ಸಂಘದವರು ವಿಚಾರಣಾಂಶಗಳಿಗೆ ಸಂಬಂಧಿಸಿದ ಮಾಹಿತಿ/ದಾಖಲೆಗಳನ್ನು ನೀಡದೇ, ಅನಗತ್ಯ ವಿಳಂಬ ಮಾಡುತ್ತಿದ್ದು, ವಿಚಾರಣೆಗೆ ಸಹಕರಿಸುತ್ತಿಲ್ಲವೆಂದು, ವಿಚಾರಣಾಧಿಕಾರಿಗಳು ಕಲಂ-25ರಡಿ ವಿಚಾರಣೆ ನಡೆಸಿ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಸಂಘದವರು 07 ವಿಚಾರಣಾಂಶಗಳಿಗೆ

ಭಾಗಶಃ ಮಾಹಿತಿ ಹಾಗೂ ದಾಖಲಾತಿಗಳನ್ನು ನೀಡಿರುವುದನ್ನು ಪರಿಶೀಲಿಸಿ, ಸದರಿ ಅಂಶಗಳಲ್ಲಿ ನ್ಯೂನ್ಯತೆಗಳು ಕಂಡು ಬಂದಿರುತ್ತವೆಂದು ಹಾಗೂ ಪ್ರಮುಖವಾಗಿ ಹಣಕಾಸಿಗೆ ಸಂಬಂಧಿಸಿದಂತಹ ಗಂಭೀರ ಸ್ವರೂಪದ ಆರೋಪಗಳ ಬಾಕಿ 10 ವಿಚಾರಣಾಂಶಗಳಿಗೆ ಸಂಬಂಧಿಸಿದಂತೆ, ಮಾಹಿತಿ/ದಾಖಲಾತಿ ಹಾಗೂ ಲಿಖಿತ ಹೇಳಿಕೆಯನ್ನು ಸಂಘವು ಸಲ್ಲಿಸಿರುವುದಿಲ್ಲ. **ಸದರಿ ವಿಚಾರಣಾ ವರದಿಯನ್ನು ಈಗಾಗಲೇ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ಜಿಲ್ಲಾ ನೋಂದಾಣಾಧಿಕಾರಿಗಳು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಇವರು ಸಂಘಕ್ಕೆ ಜಾರಿ ಮಾಡಿರುತ್ತಾರೆ.**

ಮುಂದುವರೆದು, ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರು ಸಂಘದ 108ನೇ ವಾರ್ಷಿಕ ಅಧಿವೇಶನದ ವಾರ್ಷಿಕ ವರದಿಯಲ್ಲಿ ಹಾಗೂ 2023-24ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಗಳು ವ್ಯಕ್ತವಾಗಿರುತ್ತವೆಂದು ತಿಳಿಸಿರುತ್ತಾರೆ. ಪರಿಷತ್ತಿನ ಕಛೇರಿಯ ವಾರ್ಷಿಕ ನಿರ್ವಹಣೆಯ ಕಾರ್ಯಗಳನ್ನು ವಿವಿಧ ಸಂಸ್ಥೆಗಳು ಕೈಗೊಂಡಿರುವುದರಲ್ಲಿ ಹಾಗೂ ಪರಿಷತ್ತಿನ ಕಾಮಗಾರಿಗಳಲ್ಲಿ ನ್ಯೂನತೆಗಳನ್ನು ಗಮನಿಸಲಾಗಿದೆಯೆಂದು, ಮಂಡ್ಯ ಜಿಲ್ಲೆಯಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನದ ಪೈಕಿ ರೂ.2.50 ಕೋಟಿ ಹಣಕ್ಕೆ ಬಳಕೆ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಗಳು, ಮಂಡ್ಯ ಇವರಿಗೆ ಸಲ್ಲಿಸಿರುವುದಿಲ್ಲವೆಂದು ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ಅನುಧಾನವನ್ನು, ಅನುಧಾನದ ಆದೇಶದಲ್ಲಿ ವಿಧಿಸಲಾದ ಷರತ್ತು ಹಾಗು ನಿಬಂಧನೆಗಳ ರೀತ್ಯಾ ಬಳಸದೆ ಇರುವುದು ಮೇಲ್ನೋಟಕ್ಕೆ ಸಾಭೀತಾಗಿರುವ ಹಿನ್ನೆಲೆಯಲ್ಲಿ ಸಕ್ಷಮ ಪ್ರಾಧಿಕಾರಿಯಾದ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳು, 2ನೇ ವಲಯ ಇವರು ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಅಭಿಪ್ರಾಯಪಟ್ಟು ಮಾಡಿರುವ ಶಿಫಾರಸ್ಸನ್ನು ಪರಿಗಣಿಸಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27 (ಎ) ರೀತ್ಯಾ ಕ್ರಮ ಜರುಗಿಸಲು ಸಹಕಾರ ಸಂಘಗಳ ನಿಬಂಧಕರು ಸರ್ಕಾರಕ್ಕೆ ಪ್ರಸ್ತಾವೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2)ರಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಕ ಮಾಡಬಾರದೆಂದು ಲಿಖಿತ ಹೇಳಿಕೆ ಏನಾದರೂ ಇದ್ದಲ್ಲಿ ಸಲ್ಲಿಸಲು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು/ಕಾರ್ಯದರ್ಶಿಯವರಿಗೆ ತಿಳಿಸಲಾಗಿತ್ತು. ಆದರೆ, ಸಂಘದ ಪತ್ರ ಸಂಖ್ಯೆ:ಕಸಾಪ/ಅ.ಆ.ಶಾಖೆ/2025-26/547, ದಿನಾಂಕ:17.09.2025ರಲ್ಲಿ ಸಂಘದ ಹೇಳಿಕೆ ನೀಡಲು ಮತ್ತು ವಿಚಾರಣೆಗೆ ಹಾಜರಾಗಲು ಕನಿಷ್ಠ 15 ದಿನಗಳ ಕಾಲಾವಕಾಶವನ್ನು ಕೋರಿರುತ್ತಾರೆ. ಸಂಘದ ಮನವಿಯನ್ನು ಪರಿಗಣಿಸಿ ಸಂಘದ ಲಿಖಿತ ಹೇಳಿಕೆಯನ್ನು ಸಲ್ಲಿಸಲು ದಿನಾಂಕ:22.09.2025ರವರೆಗೆ ಕಾಲಾವಕಾಶ ನೀಡಿ, ಅದೇ ದಿನಾಂಕ:22.09.2025ರಂದು ವಿಚಾರಣೆಗೆ ತಪ್ಪದೇ ಹಾಜರಾಗಲು ಸೂಚಿಸಲಾಗಿತ್ತು.

ಮೇಲೆ ಓದಲಾದ (3)ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಲಿಖಿತ ಹೇಳಿಕೆಯನ್ನು ವಿಚಾರಣೆಯಲ್ಲಿ ಸಲ್ಲಿಸಿ ಸಂಘದ ಕಾರ್ಯದರ್ಶಿರವರು ಹೇಳಿಕೆಯನ್ನು ಮೌಖಿಕವಾಗಿ ಮಂಡಿಸಿರುತ್ತಾರೆ.

ಮೇಲೆ ಓದಲಾದ (4)ರ ವಿಚಾರಣಾ ಆದೇಶದಲ್ಲಿ, ಸಂಘಕ್ಕೆ ಜಾರಿ ಮಾಡಿದ್ದ ನೋಟೀಸಿನಂತೆ ಸಂಘದ ಅಹವಾಲನ್ನು ಆಲಿಸಲು ಸರ್ಕಾರದಿಂದ ಒಂದು ಅವಕಾಶವನ್ನು ನೀಡಿ ವಿಚಾರಣೆ ನಡೆಸಲಾಯಿತು. ಸದರಿ ವಿಚಾರಣೆಯ ಆದೇಶದಲ್ಲಿ ಸಂಘದ ವಿರುದ್ಧ ದೂರು ಅರ್ಜಿಗಳಿಗೆ

ಸಂಬಂಧಿಸಿದಂತೆ ಜಿಲ್ಲಾ ನೋಂದಣಾಧಿಕಾರಿಗಳು ದಿನಾಂಕ:25.04.2025, 15.05.2025 ಮತ್ತು 10.06.2025 ಗಳಲ್ಲಿ ನೀಡಿರುವ ನೋಟೀಸ್‌ಗಳಿಗೆ ಸಂಘವು ಉತ್ತರವನ್ನು ನೀಡಿರುವುದಿಲ್ಲ. ಆದ ಕಾರಣ ಜಿಲ್ಲಾ ನೋಂದಣಾಧಿಕಾರಿಗಳು ಸ್ವಯಂ ಪ್ರೇರಿತವಾಗಿ (Suo-moto) ಪ್ರಕರಣವನ್ನು ಪರಿಗಣಿಸಿ ಸಂಘದ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನು ನೇಮಿಸಿರುತ್ತಾರೆ. ವಿಚಾರಣಾಧಿಕಾರಿಗಳು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960ರ ಕಲಂ 25ರ ಶಾಸನಬದ್ಧ ವಿಚಾರಣೆಯ 17 ಆರೋಪಗಳಿಗೆ ಸಂಬಂಧಿಸಿದಂತೆ ನೋಟೀಸ್ ಜಾರಿ ಮಾಡಿ ದಿನಾಂಕ:21.07.2025, 31.07.2025, 04.08.2025, 11.08.2025, 18.08.2025 ಮತ್ತು 22.08.2025 ಗಳಂದು ವಿಚಾರಣೆ ನಡೆಸಿರುತ್ತಾರೆ.

ಸಂಘವು 17 ಆರೋಪಗಳ ಪೈಕಿ 7 ಆರೋಪಗಳಿಗೆ ವಿಚಾರಣಾ ಅವಧಿಯಲ್ಲಿ ಭಾಗಶಃ ಉತ್ತರವನ್ನು ವಿಚಾರಣಾಧಿಕಾರಿಗೆ ಸಲ್ಲಿಸಿರುತ್ತಾರೆ. ವಿಚಾರಣಾಧಿಕಾರಿಗಳು ಸಂಘದ ಅಧ್ಯಕ್ಷರಿಗೆ ಸಾಕಷ್ಟು ಕಾಲಾವಕಾಶ ನೀಡಿದ್ದಾಗ್ಯೂ ನಿಗಧಿತ ಸಮಯದಲ್ಲಿ ಸಮಜಾಯಿಷಿಯನ್ನು ದಾಖಲೆಗಳೊಂದಿಗೆ ಸಲ್ಲಿಸಲು ವಿಫಲರಾಗಿರುತ್ತಾರೆ. ಸರ್ಕಾರದಿಂದ ಸಂಘಕ್ಕೆ ನೋಟೀಸ್ ಮತ್ತು ಅಂತಿಮ ನೋಟೀಸ್ ಅನ್ನು ಜಾರಿ ಮಾಡಿದ್ದಾಗ್ಯೂ ಸಹ ಸಂಘದ ವಾರ್ಷಿಕ ಸಾಮಾನ್ಯ ಸಭೆ ನಿಗಧಿಯಾಗಿರುವ ವಿಷಯವನ್ನು ಹೊರತುಪಡಿಸಿ ಸಂಘದ ವಿರುದ್ಧದ ಯಾವುದೇ ಆರೋಪಗಳಿಗೆ ಅಲ್ಲಗೆಳೆಯುವಂತಹ ಸೂಕ್ತ ಸಮಜಾಯಿಷಿ/ಪೂರಕ ದಾಖಲೆಗಳನ್ನು ಸಲ್ಲಿಸಲು ವಿಫಲರಾಗಿರುತ್ತಾರೆ. ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960ರ ಕಲಂ 25ರ ವಿಚಾರಣಾಧಿಕಾರಿಗಳ ವರದಿಯಲ್ಲಿ ಸಂಘದ ವಿರುದ್ಧದ ಆರೋಪಗಳು ಗಂಭೀರವಾಗಿರುತ್ತದೆ, ಅದರಲ್ಲಿ ಸಂಘದ ಹಣಕಾಸಿನ ದುರುಪಯೋಗಕ್ಕೆ ಸಂಬಂಧಿಸಿದ ಆರೋಪಗಳಿರುತ್ತದೆಯೆಂದು ತಿಳಿಸಿರುತ್ತಾರೆ. ಸಕ್ಷಮ ಪ್ರಾಧಿಕಾರಿಗಳು ಹಾಗೂ ಸಹಕಾರ ಸಂಘದ ಉಪ ನಿಬಂಧಕರು, 2ನೇ ವಲಯ ಇವರು ಕರ್ನಾಟಕ ಸಂಘಗಳ ನೋಂದಣಿ ನಿಯಮ, 1961ರ ನಿಯಮ-8(5) ರಡಿಯಲ್ಲಿ ವಿಚಾರಣಾಧಿಕಾರಿಗಳ ಮಧ್ಯಂತರ ವರದಿಯನ್ನು ಸಂಘಕ್ಕೆ ಜಾರಿ ಮಾಡಿರುತ್ತಾರೆ.

ವಿಚಾರಣಾಧಿಕಾರಿಗಳು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960ರ ಕಲಂ 25ರ ಮಧ್ಯಂತರ ವರದಿಯಲ್ಲಿ ಸಂಘದ ವಿರುದ್ಧದ ಆರೋಪಗಳು ಗಂಭೀರವಾಗಿರುತ್ತದೆ. ಅದರಲ್ಲಿ ಸಂಘದ ಹಣಕಾಸಿನ ದುರುಪಯೋಗಕ್ಕೆ ಸಂಬಂಧಿಸಿದ ಆರೋಪಗಳಿರುತ್ತದೆ. ವಿಚಾರಣಾಧಿಕಾರಿಯ ವರದಿ, ಜಿಲ್ಲಾ ನೋಂದಣಾಧಿಕಾರಿಗಳ ಶಿಫಾರಸ್ಸು ಹಾಗೂ ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆಯಂತೆ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಕುರಿತು ಸಂಘಕ್ಕೆ ಹೊರಡಿಸಲಾದ ದಿನಾಂಕ: 15-09-2025ರ ನೋಟೀಸ್ ಮತ್ತು ದಿನಾಂಕ: 17-09-2025ರ ಅಂತಿಮ ನೋಟೀಸ್‌ಗೆ ಸಂಘವು ಸಮರ್ಪಕ ಹಾಗೂ ಸಮರ್ಥನೀಯ ಹೇಳಿಕೆ/ದಾಖಲಾತಿಗಳನ್ನು ಸಲ್ಲಿಸಲು ವಿಫಲರಾಗಿರುವ ಹಿನ್ನೆಲೆಯಲ್ಲಿ ಸಂಘದ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿ ಮತ್ತು ದಾಖಲೆಗಳನ್ನು ವಿಚಾರಣಾಧಿಕಾರಿಗಳಿಗೆ ಒದಗಿಸಲು ಅನುವಾಗುವಂತೆ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960ರ ಕಲಂ.27(ಎ)ರನ್ವಯ ಆಡಳಿತಾಧಿಕಾರಿಯನ್ನು ನೇಮಿಸಲು ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಗಿದೆ.

ಮೇಲೆ ಓದಲಾದ (5)ರ ಮಾನ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶ ಈ ಕೆಳಕಂಡಂತಿದೆ:

Sri. Jayakumar S. Patil, the learned Senior Counsel for the petitioners and Sri. V G Bhanu Prakash, learned Additional Advocate General who appears on behalf of Sri. Rahul

Cariappa who accepts notice for the respondents, are heard on the petitioners' request for interim order.

The petitioners' grievance is with the Notice [Annexure J] to participate in an enquiry contemplated under Section 27A of the Karnataka Societies Registration Act, 1960 [the Act]. On the circumstances, this Court must observe that:

[a] though the proceeding under Section 27A of the Act was scheduled to be held on 22.09.2025, it remains undisputed that no proceeding was held on that date, and the proceeding is adjourned but the next date is yet to be fixed,

[b] this Court in Writ Petition No.20919/2025 has clarified that the Society [the Kannada Sahitya Parishattu] would be entitled to hold its Annual General Body Meeting (AGM) in terms of the bye-laws and this Court has also permitted an enquiry under Section 25 of the Act to proceed,

[c] the petitioners have filed an intra-court appeal in Writ Appeal No.1460/2025 as against this Court's order refusing interim order on the submission of the Accounts without the AGM being conducted, and this writ appeal is dismissed.

Sri. Jayakumar S. Patil submits that after the disposal of the writ appeal, the petitioners have filed the accounts and that the third respondent has filed an interim report with the second respondent which paves the way for the enquiry under Section 27A of the Act with the possibilities for the appointment of an Administrator to oversee the affairs of the Society. Sri V G Bhanu Prakash, learned Additional Advocate General, submits that this Court must permit the enquiry under Section 27A of the Act to proceed lest it is rendered infructuous with certain resolutions being passed in the AGM which is scheduled to be held on 05.10.2025.

The petitioner's request for interim order for stay of the notice dated 15.09.2025 for enquiry under Section 27A of the Act and the consequential further proceedings is considered in the light of the afore circumstances and the submissions. This Court must observe that neither a resolution in the AGM nor the outcome in the enquiry which stands deferred for the present could bring about a closure when this Court is seized of the dispute in Writ Petition No.20919/2025. The outcome of the enquiry under Section 25 of the Act, which is the reason for the subject enquiry under Section 27A of the Act, and the Resolutions even if the AGM proceeds as permitted by this Court in Writ Petition No. 20919/2025, will be subject to this Court's scrutiny in such proceedings. Therefore, this Court must at this stage opine that if there could be AGM scheduled on 05.10.2025 there could also be further proceedings in the pending enquiry, but the outcome thereof must be placed before this Court before they are implemented.

While so directing, the office is called upon to re-list this petition on 14.10.2025.

ಆಡಳಿತಾಧಿಕಾರಿಯನ್ನು ನೇಮಿಸುವ ಕುರಿತು ಸಂಘಕ್ಕೆ ಹೊರಡಿಸಲಾದ ದಿನಾಂಕ:15.09.2025ರ ನೋಟೀಸ್ ಮತ್ತು ದಿನಾಂಕ:17.09.2025ರ ಅಂತಿಮ ನೋಟೀಸ್‌ನಂತೆ ಸಂಘದ ಕಾರ್ಯದರ್ಶಿಗಳು ಸದರಿ ವಿಚಾರಣೆಗೆ ದಿನಾಂಕ: 22.09.2025 ರಂದು ಹಾಜರಾಗಿದ್ದರೂ ಸಹಾ ಸಂಘದ ವಿರುದ್ಧದ 17 ಆರೋಪಗಳಿಗೆ ಸಮರ್ಪಕ ಹಾಗೂ ಸಮರ್ಥನೀಯ ಹೇಳಿಕೆ/ದಾಖಲಾತಿಗಳನ್ನು ಸಲ್ಲಿಸಲು ವಿಫಲರಾಗಿರುತ್ತಾರೆ. ಸಂಘದ ಲಿಖಿತ ಸಮಜಾಯಿಷಿ, ವಿಚಾರಣಾಧಿಕಾರಿಯ ವರದಿ, ಜಿಲ್ಲಾ ನೋಂದಣಾಧಿಕಾರಿಗಳ ಶಿಫಾರಸ್ಸು ಹಾಗೂ ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆಯಿಂದ ಈ ಕೆಳಕಂಡಂತೆ ವಿಧಿತವಾಗುತ್ತದೆ.

ಸಂಘದ ಅಧ್ಯಕ್ಷರು ಉದ್ದೇಶ ಪೂರ್ವಕವಾಗಿ ವಿಚಾರಣೆಯಲ್ಲಿ ಭಾಗವಹಿಸುತ್ತಿಲ್ಲ ಹಾಗು ದಾಖಲೆಗಳನ್ನು ಒದಗಿಸುತ್ತಿಲ್ಲ. ವಿಚಾರಣೆಗೆ ಒಳಪಡಿಸಿರುವ ಆರೋಪಗಳು ಹಣಕಾಸು ದುರುಪಯೋಗಕ್ಕೆ ಸಂಬಂದಿತವಾಗಿದ್ದು ದಾಖಲೆಗಳ ಅಲಭ್ಯತೆಯಿಂದ ಹಣ ದುರುಪಯೋಗದ ಪರಿಮಾಣ/ಸ್ವರೂಪ ತೀರ್ಮಾನಿಸಲು ಸಾಧ್ಯವಾಗುತ್ತಿಲ್ಲ. ಆದ ಕಾರಣ ಪೂರ್ಣ ಮಾಹಿತಿಯನ್ನು ಒದಗಿಸಿ ಗಂಭೀರವಾದಂತಹ ಹಣಕಾಸು ದುರುಪಯೋಗಕ್ಕೆ ಸಂಬಂದಿಸಿದ ಆರೋಪಗಳ ಬಗ್ಗೆ ವಿಚಾರಣೆ ನಡೆಸಿ ತೀರ್ಮಾನಿಸಲು ವಿಚಾರಣಾವಧಿ ಪೂರ್ಣಗೊಳ್ಳುವವರೆಗೂ ಆಡಳಿತಾಧಿಕಾರಿ ನೇಮಿಸಿ ಅವರ ಮುಖಾಂತರ ಎಲ್ಲಾ ದಾಖಲೆಗಳನ್ನು ಪಡೆದು ವಿಚಾರಣೆಯನ್ನು ಮುಂದುವರೆಸಿ ಪೂರ್ಣಗೊಳಿಸಲು ಸಾಧ್ಯವೇ ಹೊರತು ಪ್ರಸ್ತುತ ಆಡಳಿತದಲ್ಲಿರುವ ಸಮಿತಿಯ ಅಸಹಕಾರ ಧೋರಣೆಯಿಂದ ವಿಚಾರಣೆ ಮುಂದುವರೆಸುವುದು ಅಸಾಧ್ಯ. ಸಂಘದ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿ ಮತ್ತು ದಾಖಲೆಗಳನ್ನು ವಿಚಾರಣಾಧಿಕಾರಿಗಳಿಗೆ ಒದಗಿಸಲು ಅನುವಾಗುವಂತೆ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960ರ ಕಲಂ.27(ಎ) ರನ್ವಯ ವಿಚಾರಣಾವಧಿಗೆ ಸೀಮಿತವಾಗುವಂತೆ ಆಡಳಿತಾಧಿಕಾರಿಯನ್ನು ನೇಮಿಸುವುದು ಅವಶ್ಯಕವೆಂದು ಸರ್ಕಾರವು ತೀರ್ಮಾನಿಸಿದೆ.

ಅದರಂತೆ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 281 ಸಿಎಸ್‌ಆರ್ 2025
ಬೆಂಗಳೂರು, ದಿನಾಂಕ: 30.09.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಕನ್ನಡ ಸಾಹಿತ್ಯ ಪರಿಷತ್ತು(ನೋಂದಣಿ ಸಂಖ್ಯೆ:328/1915-16), ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018 ಈ ಸಂಘಕ್ಕೆ **ಶ್ರೀಮತಿ, ಕೆ.ಎಂ. ಗಾಯಿತ್ರಿ, ಭಾ.ಆ.ಸೇ., ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ** ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ 03 ತಿಂಗಳ ಅವಧಿಗೆ **ಅಥವಾ** ಕಲಂ.25ರ ವಿಚಾರಣೆ ಪೂರ್ಣಗೊಳ್ಳುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ.

ಈ ಆದೇಶವನ್ನು ಮಾನ್ಯ ಉಚ್ಚ ನ್ಯಾಯಾಲಯದ **ರಿಟ್ ಅರ್ಜಿ ಸಂಖ್ಯೆ:29086/2025** ರಲ್ಲಿ ನೀಡಿರುವ ಮಧ್ಯಂತರ ಆದೇಶದಂತೆ ಮಾನ್ಯ ಉಚ್ಚ ನ್ಯಾಯಾಲಯದ ಆಧ್ಯ ಗಮನಕ್ಕೆ ತಂದು ಮಾನ್ಯ ನ್ಯಾಯಾಲಯವು ನೀಡುವ ನಿರ್ದೇಶನದ ನಂತರ ಈ ಆದೇಶವನ್ನು ಅನುಷ್ಠಾನಗೊಳಿಸುವುದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಮಾನ್ಯ ಉಚ್ಚ ನ್ಯಾಯಾಲಯವು ಮೇಲ್ಕಂಡ ಪ್ರಕರಣದಲ್ಲಿ ನೀಡುವ ನಿರ್ದೇಶನದಂತೆ ಆಡಳಿತಾಧಿಕಾರಿಯು ಸಂಘದ ಪ್ರಭಾರವನ್ನು ವಹಿಸಿಕೊಂಡು, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 25ರ ವಿಚಾರಣೆಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿ ಮತ್ತು ದಾಖಲೆಗಳನ್ನು ತ್ವರಿತವಾಗಿ ವಿಚಾರಣಾಧಿಕಾರಿಗಳಿಗೆ ಒದಗಿಸುವಂತೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-237

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 201 ಸಿಎಸ್‌ಆರ್ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 30.09.2025

ತಿದ್ದುಪಡಿ ಆದೇಶ

ಚಿಕ್ಕಮಗಳೂರು ಜಿಲ್ಲಾ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘ,(ನೋಂದಣಿ ಸಂಖ್ಯೆ:165/94-95), ಚಿಕ್ಕಮಗಳೂರು, ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲಾಗಿರುವ ಸರ್ಕಾರದ ಆದೇಶದಲ್ಲಿ ಆದೇಶ ಸಂಖ್ಯೆ: **"ಸಿಒ 207 ಸಿಎಸ್‌ಆರ್ 2025, ದಿನಾಂಕ:15.09.2025"** ಎಂಬುದರ ಬದಲಾಗಿ **"ಸಿಒ 201 ಸಿಎಸ್‌ಆರ್ 2025, ದಿನಾಂಕ:15.09.2025"** ಎಂದು ತಿದ್ದಿ ಓದಿಕೊಳ್ಳತಕ್ಕದ್ದು. ಇನ್ನುಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-238

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.
THAMMAIAH